Volume : 30
Issue : 6-7
September-October 2018

LAHARI COMMUNIQUE
Its Unique

Tortfeasor can claim compensation on structured formula basis

In a claim petition for compensation based on structured formula basis, negligence of the driver of the offending vehicle is not an issue, ruled the Supreme Court recently. Basing its decision on decided cases, "The issue .... is no longer res integra...", ruled the apex Court. The Court made clear that the tortfeasor can claim compensation even when alleged accident occurred by negligence of tortfeasor.

Motor Vehicle Accident Claim petitions seeking compensation under Sec. 163A of the Motor Vehicles Act, 1988, need not allege and prove wrongful or negligent act on the part of the driver of offending vehicle. Sec. 163A was brought in the 1988 Act by way of an amendment in 1994. Compensation in such cases is payable as indicated in the Second Schedule to the Act.

The Court was dealing with an appeal wherein the order of the Karnataka High Court holding that tortfeasor or his legal heirs are not entitled to compensation under Sec. 163A was under challenge. The apex Court did not agree with this interpretation either.

The driver of a car met with an accident when the car dashed into a truck. The driver of the car died in the accident caused by him. His LRs sued the owner of the truck and its insurer for compensation by filing a petition under Sec. 163A of the Act before a Motor Vehicles Accident Claims Tribunal, Bengaluru. The Tribunal awarded a particular amount of compensation to the legal heirs.

This was challenged both by the claimants as well as by the insurer. The claimants questioned the quantum and the insurer questioned the very award. The High Court dealing with both the appeals, allowed the one filed by the insurer and dismissed that of the claimants. The reasoning of the High Court was the torfeasor himself or his LRs cannot claim compensation under structured formula, though the Court agreed with the principle that in such cases negligent act or wrongful act on the part of the offending vehicle need not be pleaded and proved. Entitlement to compensation under this Section, according to the High Court was only to an innocent third party or his LRs who suffer by accident caused by someone.

The apex Court dealing with the appeal of the claimants disagreed with the High Court. The judgment in *Sunil Kumar and Another* of the year 2017 was cited before the bench. Therein the Court had ruled that if the insurer was permitted to raise the defence of negligence in proceedings under Sec. 163A, such proceedings would come on par with proceedings under Sec. 166 of the Act which is not the legislative intent. Noticing this legal position, the apex Court allowed the appeal of the legal heirs of the deceased driver of the car and restored the judgment and Award of the Tribunal. ●

30th year of publication

Taxing statues to be interpreted strictly: SC

In interpreting taxing statutes, Court has to apply strict rule of interpretation, held the apex Court recently. The ruling rendered by a constitution bench was examined a question referred to it namely, 'What is the interpretative rule to be applied while interpreting a tax exemption provision/ notification when there is an ambiguity as to its applicability with reference to the entitlement of the assessee or the rate of tax to be applied?"

The Court in the case was concerned with a situation where there is ambiguity in an exemption notification or exemption clause, in which event the benefit of such ambiguity cannot be extended to the subject/assessee by applying the principle that an obscure and/or ambiguity or doubtful fiscal statute must receive a construction favoring the assessee.

It is general rule of interpretation that both penal and taxing statutes should receive strict interpretation when there is any

▶▶4

SARFAESI Act: classification of land in record is not conclusive

For the purpose of proceeding in respect of security interest in land, nature of the land should be deduced as a matter of fact from its nature and usage and not from classification of land in revenue records, ruled apex Court. Classification of land in revenue records as agricultural land is not conclusive for the question whether the Securitisation and Reconstruction of Financial Assets and Enforcement of Security Interest (SARFEASI) Act is applicable or not, held the Court.

Sec. 31(i) of the Act makes clear that the provisions of the Act are not applicable to any security interest created in agricultural land.

Before the matterreached the Apex court a division bench of the Madras High Court concluded that since the provisions of the SARFAESI Act do not apply to agricultural land, certain proceeding initiated against agricultural land is nullity. In consequence, the Court held that a security interest in agricultural land cannot be enforced.

On the security interest created by certain Yelagiri Diary Farm in a piece of agricultural property, Indian Bank lent certain sum of money to the Farm for setting up a diary farm. The Farm defaulted in repayment of loan. A notice under SARFEASI Act was given to the defaulter and overruling the objection that the land is agricultural in nature, it was possessed by the secured creditor, Bank. The aggrieved defaulter resorted to certain proceedings by filing suit and writ petition before the Madras High Court which did not bring any success. By this time, the Bank had auctioned the property and sale certificate was issued

News, articles and other writes up published in this News Magazine are the intellectual property of the News Magazine. Any form of reproduction thereof by any one without the written consent of the Editor would amount to violation of the provisions of the Copy Right Act, 1957. -Ed.

Lease Disputes & Their Arbitrability

A recent decision of the Supreme Court in *Himangani Enterprises vs. Kamaljeet Singh Ahluwalia* has clouded the initiation of arbitration in disputes between Lessors and Lessees. In four sentences of rather ambiguous reasoning, the judgment has sought to deny the right to arbitrate to scores of Lessors and Lessees. Lessors, who inserted arbitration clauses in their lease documentation, for the expeditious eviction of their tenants, it appears, must be relegated to a civil Court to pursue their remedies.

The question that arose in *Himangani,* dealt first by the Delhi High Court, related to disputes between parties to a lease that had admittedly expired by efflux of time. After referring to two of its earlier decisions, the High Court concluded that "....when the Lease Agreement in respect of a property is exhausted, then the arbitration clause contained therein cannot be invoked..." and that there was no justification to "invoke the arbitration clause of an exhausted Lease Deed to seek resolution of the disputes arising from the Lease Deed." Based on such reasoning, the High Court affirmed the Trial Court's order rejecting the Lessee's application to refer the parties to arbitration under Section 8 of the Arbitration & Conciliation Act, 1996 ("Act").

M.V. Sundararaman
Advocate

Interestingly, on special leave the Supreme Court did not (re)examine the correctness of the finding on the key issue before the Delhi High Court i.e., whether an arbitration clause in a lease deed that stood terminated by efflux of time could be invoked by a Lessee to agitate its grievance against the Lessor? On the contrary, the Supreme Court not only examined the matter on a tangent but also, in that process, appears to have expressed a view (that could, at best, be considered obiter) contrary to its own in *Booz Allen & Hamilton Inc. Vs. SBI Home Finance Limited.*

One of the arguments advanced before the Supreme Court(on behalf of the Lessee) was that since the premises-in-question was not governed by the provisions of the Delhi Rent Act, 1995 ("Rent Act"), there was no impediment to refer the parties to arbitration. The Supreme Court, while dealing with that argument, without confining itself to the applicability and the special protection accorded to tenants under Rent legislations, has made sweeping observations to deny arbitration even to disputes arising from leases governed by the provisions of the Transfer of Property Act, 1881 ("TP Act"). Unlike the clear reasoning in *Booz Allen,* which delineates and reasons why certain disputes are non-arbitrable, there is no clarity in *Himangani* that appears to deny the right to arbitration to an aggrieved party to a lease governed by the TP Act. *Booz Allen* plainly excludes from the ambit of arbitration eviction and tenancy matters governed by special statutes where the tenant enjoys statutory protection against eviction and where special Courts are conferred jurisdiction for such matters. Though, *Himangani* expressly states that it follows the ratio in *Booz Allen,* it has in fact done the contrary by stating that "....no sooner the exemption is withdrawn or ceased to have its application to a particular premises, the Act becomes applicable to such premises. In this view of the matter, it cannot be contended that the provisions of the Arbitration Act would, therefore, apply to such premises."

The applicability of the provisions of TP Act to the premises-in-question never arose before the Supreme Court in *Himangani.* On the contrary, the applicability of the provisions of the Delhi Rent Act to the premises-in-question was agitated and examined. Nevertheless, the Supreme Court made a reference to TP Act, as extracted above. The reasoning in *Himangani,* it is submitted, is incorrect and runs against the very grain of the Act. *Booz Allen* reiterated that generally and traditionally, all disputes relating to rights in *personam* are considered arbitrable in contrast with disputes relating to rights in *rem,* which are unsuited for private arbitration. This general distinction has been lost sight of in *Himangani.* The Act does not specifically exclude any category of disputes as not being arbitrable. There is no reason why large, heavily-negotiated commercial leases must be excluded from the purview of the Act. The decision in *Himangani* is likely to create, and has in fact already, significant confusion in the appointment of arbitral tribunals and grant of interim measures in Lessor-Lessee disputes. Unless the Supreme Court clarifies the position or reiterates that *Booz Allen* lays down the correct law, confusion will prevail and the right to refer disputes to arbitration would be unjustifiably denied to a large section of citizens. ●

SARFAESI Act...

1 ▶▶

in favour of auctin purchaser. The defaulter then challenged sale certificate before the Debt Recovery Tribunal (DRT), Chennai which was also dismissed. The defaulter then challnaged the sale certificate before the Debt Recovery Appellate Tribunal (DRAT). The DRAT set aside the sale on the ground that the land was exempt from the provisions of the Act and hence, could not have been auctioned.

The auction purchaser and the Bank both challenged the order of DRAT before the Madras High Court. The Court dismissed the writ petition taking the same view as taken by the DRAT.

The bank appealed to the apex Court alongwith the auction purchaser. In support of the appeal it was argued that the property which was the subject matter of the mortgage comprised of dry land and was not exempt from the provisions of the Act. It was also urged before the Court that whether any agricultural activity is taking place in the land is a question of fact. Supporting the argument of the Bank, the auction purchaser argued that plots have been carved out of the land and sold. The successful defaulter on the other hand relied upon a judgment of the Court in *Blue Coast Hotels Limited* to argue that no security interest could be created in respect of agricultural land having regard to Sec. 31(i) of the Act.

The Court noticed that definition of 'Security Interest' as contained in Sec. (zf) prior to and after amendment to the Act excludes agri land. Therefore, it is correct that in respect of agri land no security interest could be created. At the same time, Court also noticed "classification of land in the revenue records as agricultural is not dispositive or conclusive of the question whether the SARFAESI Act does or does not apply". The Court ruled that `whether a parcel of land is agricultural must be deduced as a matter of fact from the nature of the land, the use to which it was being put on the date of creation of the security interest and the purpose for which it was set apart'.

Distinguishing the judgment in Blue Coast Hotels Limited the Court noticed that in the said case, out of total extent of the property mortgaged, certain pieces of lands were specifically kept apart for agricultural purpose to grow fruits and vegitables for the use of the Hotel and in respect of these pieces of lands revenue records also depicted them to be agricultural in nature. The Court therefore, felt that Blue Coast Hotels Limited is not a precedent on the point.

Having noticed this position, the Court felt that the DRAT in the appeal and the Madras High Court in the writ petition failed to adjudicate on the basic issue as to whether the land in respect of which the security interest was created, was agricultural in nature. Therefore, the Court remanded the matter to the High Court to adjudicate nature of the land by its usage as on the date of creating security interest and not merely by the entries in the revenue records.

Lahari Foundation

In July 2018 Lahari Foundation provided medical assistance of Rs.17,640/- to Ms K.R.Satya Prabha Advocate

ಲಹರಿ ಸಂವಾದ

ಸಂಪುಟ : ೧೮ ಸಂಚಿಕೆ : ೬-೭
ಶಾಲಿವಾಹನ ಶಕ ೧೯೩೯, ಶ್ರೀ ಹೇಮಲಂಬಿ ನಾಮ ಸಂವತ್ಸರ, ಶ್ರಾವಣ-ಅಶ್ವಿನ

ಪುಟ ೧: ತಿಂಗಳ ಸುದ್ದಿ
ಪುಟ ೨: ಸುದ್ದಿ
ಪುಟ ೩: ಪ್ರಚಲಿತ
ಪುಟ ೪: ಸುದ್ದಿ

ಮಾರಾಟ ಪತ್ರದ ರದ್ದತಿ: ಕೇವಲ ಆರೋಪದಿಂದ ಸಾಧ್ಯ ಇಲ್ಲ

'ನನ್ನ ತಂದೆ ಮಾಡಿಕೊಟ್ಟ ಮಾರಾಟ ಪತ್ರವನ್ನು ವಂಚನೆ ಮತ್ತು ಸುಳ್ಳು ಹೇಳಿ ಪ್ರತಿವಾದಿ ಬರೆಸಿಕೊಂಡಿದ್ದಾರೆ' ಎಂಬ ಸಂಗತಿಯನ್ನು ಸಾಬೀತುಪಡಿಸಲು ದಾವಾದ ವಾದಿಯೊಬ್ಬರು ಕೇವಲ ಆಪಾದನೆಯನ್ನು ಮಾಡಿದರಷ್ಟೆ ಸಾಲದು, ಎಂದಿದೆ ಸರ್ವೋಚ್ಚ ನ್ಯಾಯಾಲಯ. ಈ ಬಗ್ಗೆ ಸಾಕ್ಷ್ಯ ಇಲ್ಲದಿರುವುದನ್ನೂ ನ್ಯಾಯಾಲಯ ಎತ್ತಿ ತೋರಿಸಿದೆ.

ಈ ಪ್ರಕರಣದಲ್ಲಿ ಆಗಿದ್ದೇನೆಂದರೆ ಕೃಷ್ಣಾದೇವಿ ಆಸ್ತಿ ವಿಭಜನೆಗಾಗಿ ದಾವಾ ಹೂಡಿದರು. ಈ ದಾವಾದಲ್ಲಿ ಕೃಷ್ಣಾದೇವಿಯ ಚಿಕ್ಕಪ್ಪ ಮಥುರಾ ಪ್ರಸಾದ್ ಮತ್ತು ಚಿಕ್ಕಪ್ಪನ ಮಗ ಕೇಶ್ರಿನಂದನ್ ಪ್ರತಿವಾದಿಗಳಾಗಿದ್ದರು. ವಾದಿ ಹೇಳಿದಂತೆ ದಾವಾಸ್ತಿ ಅವರ ಅಜ್ಜ ಬನಶಿಧರ್ ಅವರಿಗೆ ಸೇರಿತ್ತು. ಅವರ ಕಾಲಾನಂತರ ಅವರ ಇಬ್ಬರು ಮಕ್ಕಳಾದ ಧರಮ್ ಸಿಂಘ್ ಮತ್ತು ಮಥುರಾ ಪ್ರಸಾದ್ ಇವರಿಬ್ಬರಿಗೆ ಸಮನಾಗಿ ಆಸ್ತಿ ಬಂದಿತು. 'ಧರಮ್ ಸಿಂಘ್ ತೀರಿದ ನಂತರ ಅವರಿಗೆ ಸೇರಿದ್ದ ದಾವಾಸ್ತಿಯ ಶೇಕಡಾ ೫೦ ರಷ್ಟು ಭಾಗ ನನಗೆ ಬಂದಿದೆ, ಉಳಿದ ಶೇ ೫೦ ಭಾಗ ಮಥುರಾ ಪ್ರಸಾದ್‌ರಿಗೆ ಸೇರಿದೆ' ಎಂದರು ವಾದಿ. ಈ ವಾದಿಯ ತೀರಿದ ಧರಮ್ ಸಿಂಘರ ಮಗಳು.

ಪ್ರತಿವಾದಿಗಳು ಪ್ರಕರಣದಲ್ಲಿ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿ, ವಾದಿ ಹೇಳಿದ ಬಹುಪಾಲು ಸಂಗತಿಗಳು ನಿಜ ಎಂದರು. ಪ್ರತಿವಾದಿಗಳ ಪ್ರಕಾರ ದಾವಾಸ್ತಿ ಬನಶಿಧರ್‌ಗೆ ಸೇರಿದ್ದು, ಅವರ ನಿಧನಾನಂತರ ಅದು ಅವರಿಬ್ಬರು ಮಕ್ಕಳಿಗೆ ಸಮನಾಗಿ ಬಂದಿದ್ದೂ ನಿಜ. ನಂತರದ ಸಂಗತಿಯೊಂದನ್ನು ವಾದಿ ಹೇಳಿಲ್ಲ ಎಂದರು ಈ ಪ್ರತಿವಾದಿಗಳು. ಅವರ ಪ್ರಕಾರ ಧರಮ್ ಸಿಂಘ್ ತಮ್ಮ ಭಾಗದ ಆಸ್ತಿಯನ್ನು ಅವರು ಬದುಕಿದ್ದಾಗಲೆ ಪ್ರತಿವಾದಿಗಳಿಗೆ ಮಾರಾಟ ಪತ್ರದಂತೆ ಮಾರಾಟ ಮಾಡಿ ಅದನ್ನು ನೊಂದಣಿ ಮಾಡಿಸಿದ್ದರು. ಹೀಗಾಗಿ ಈಗ ಅವರ ನಿಧನಾನಂತರ ಆಸ್ತಿ ವಿಭಜನೆಯ ಪ್ರಶ್ನೆಯೆ ಉದ್ಭವಿಸುವುದಿಲ್ಲ ಎಂದರು.

ಈ ಪ್ರತಿವಾದ ಪತ್ರಕ್ಕೆ ಉತ್ತರ ರೂಪದ ಹೇಳಿಕೆ ಸಲ್ಲಿಸಿದ ವಾದಿ ಈ ಮಾರಾಟ ಪತ್ರವನ್ನು ವಂಚನೆ ಮತ್ತು ಸುಳ್ಳು ಹೇಳಿಕೆ (fraud and misrepresentation)ಯಿಂದಾಗಿ ಬರೆಸಿಕೊಂಡದ್ದಾಗಿದೆ ಎಂದರು.

ದಾವಾದ ವಿಚಾರಣೆಯಲ್ಲಿ ವಾದಿ ಈ ಹೇಳಿಕೆಯನ್ನು ಪುನರುಚ್ಚರಿಸಿದರಷ್ಟೆ, ಬೇರೆನೂ ಸಾಕ್ಷ್ಯವನ್ನು ತರಲಿಲ್ಲ. ಪ್ರತಿವಾದಿಗಳು ಪ್ರತಿಸಾಕ್ಷ್ಯ ನೀಡಿದ್ದಲ್ಲದೆ ಪತ್ರವನ್ನು ನೊಂದಣಿ ಮಾಡಿಸಿದ ನೊಂದಣಿ ▶▶೪

ಧರಣಿ ಹಕ್ಕು – ಸ್ಥಳ ಹಕ್ಕಿನದಲ್ಲ

ಸರಕಾರದ ಕ್ರಮಗಳನ್ನು ವಿರೋಧಿಸುವುದು, ಧರಣಿ ಕೂಡುವುದು, ಮುಷ್ಕರ ಹೂಡುವುದು ಇವೆಲ್ಲ ನಾಗರೀಕರ ಮೂಲಭೂತ ಹಕ್ಕಿನ ಭಾಗಗಳೆ ಆದರೂ ತಮಗೆ ತೋಚಿದ ಸ್ಥಳದಲ್ಲೆ ಧರಣಿ ಹೂಡುವುದು ಹಕ್ಕಲ್ಲ ಎಂದಿದೆ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪೊಂದು.

ಅಭಿವ್ಯಕ್ತಿ ಸ್ವಾತಂತ್ರ ನಾಗರೀಕರ ಮೂಲಭೂತ ಹಕ್ಕು. ವಿರೋಧವೂ ಒಂದು ರೀತಿಯ ಅಭಿವ್ಯಕ್ತಿ. ಸಂವಿಧಾನದ ಪರಿಚ್ಛೇದ ೧೯ ಇಂತಹ ಹಕ್ಕನ್ನು ರಕ್ಷಿಸುತ್ತದೆ.

ಈ ಕಾನೂನನ್ನು ತಮ್ಮ ಪರ ಉಪಯೋಗಿಸಿಕೊಂಡ ಕಾರ್ಮಿಕ ಸಂಘಟನೆಯೊಂದು ಸರಕಾರ ನಿಷೇಧಿಸಿದ ಸ್ಥಳದಲ್ಲೆ ಧರಣಿ ಕೂಡುವುದು, ಮುಷ್ಕರ ಹೂಡುವುದು ತಮ್ಮ ಹಕ್ಕೆಂದಿತು, ಈ ಹಕ್ಕಿನ ರಕ್ಷಣೆಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿ ಸರಕಾರಕ್ಕೆ ನಿರ್ದೇಶನ ಕೋರಿತು.

ಈ ಪ್ರಕರಣಕ್ಕೆ ಹಿನ್ನೆಲೆಯೊಂದಿದೆ. ದೆಹಲಿಯ ಜಂತರ್ ಮಂತರ್ ಸುತ್ತಮುತ್ತಲಿನ ಸ್ಥಳ ನಿವಾಸದ ಸ್ಥಳ. ಇಲ್ಲಿ ಸಂಸತ್ತಿನ ಸದಸ್ಯರ ನಿವಾಸಗಳಿವೆ, ದೆಹಲಿ ಸರಕಾರದ ಕೆಲ ಅಧಿಕಾರಿಗಳ ನಿವಾಸಗಳಿವೆ, ಕೇರಳ ಸರಕಾರ ಅತಿಥಿಗೃಹವಿದೆ. ಹಾಗಿದ್ದೂ ಜಂತರ್ ಮಂತರಿನ ಸುತ್ತಮುತ್ತಲ ಜಾಗ ಧರಣಿಕೋರರಿಗೆ ಪ್ರಿಯವಾದ ಜಾಗವಾಗಿತ್ತು-ಧರಣಿ ಕೂಡುವುದಕ್ಕೆ. ಇತ್ತೀಚೆಗೆ ಇಲ್ಲಿ ಧರಣಿ- ▶▶೪

'ತೀರಿದವನ ಆದಾಯದ ಸಾಬೀತಿಗೆ ವೇತನದ ಸರ್ಟಿಫಿಕೆಟ್ ಒಂದೆ ಆಧಾರವಲ್ಲ'

ಮೋಟರ್ ವಾಹನ ನ್ಯಾಯಾಧಿಕರಣ ಪರಿಹಾರ ಧನ ನಿಗದಿಪಡಿಸಲು ತೀರಿಕೊಂಡ ವ್ಯಕ್ತಿಯ ಆದಾಯವನ್ನು ಪರಿಗಣಿಸಬೇಕಷ್ಟೆ? ಈ ಆದಾಯದ ಸಾಬೀತಿಗೆ ವೇತನದ ಸರ್ಟಿಫಿಕೆಟ್ ಒಂದೆ ಆಧಾರವಲ್ಲ ಎಂದಿದೆ ಸರ್ವೋಚ್ಚ ನ್ಯಾಯಾಲಯ.

ಹಾಲಿ ಪ್ರಕರಣದ ಈ ತೀರ್ಪಿಗೆ ಕಾರಣವಾದದ್ದೇನೆಂದರೆ ತೀರಿದವನ ವೇತನದ ಸರ್ಟಿಫಿಕೆಟ್ ಕಡಿಮೆ ವೇತನ ತೋರಿಸುತ್ತಿದ್ದು ಆದಾಯ ತೆರಿಗೆಯ ರಿಟರ್ನ್ ಹೆಚ್ಚಿನ ಆದಾಯವನ್ನು ತೋರಿಸುತ್ತಿತ್ತು. ಹೆಚ್ಚಿನ ಆದಾಯ ತೋರಿಸುವ ರಿಟರ್ನ್ ಅನ್ನು ಅವಲಂಬಿಸಲು ನಿರಾಕರಿಸಿದ ನ್ಯಾಯಾಧಿಕರಣ 'ಕ್ಲೇಮುದಾರರು ಈ ವ್ಯತಿರಿಕ್ತ ಸಂಗತಿಗಳ ಬಗ್ಗೆ ಸ್ಪಷ್ಟೀಕರಣ ಕೊಡಬೇಕಿತ್ತು' ಎಂದು ಹೇಳಿ ಅದನ್ನು ಬದಿಗಿರಿಸಿ ಕಡಿಮೆ ಆದಾಯದ ವೇತನದ ಸರ್ಟಿಫಿಕೆಟನ್ನು ಅವಲಂಬಿಸಿ ಆದಾಯ ನಿರ್ಣಯ ಮಾಡಿತ್ತು.

ಈ ವಿವಾದಿತ ವಿಷಯ ಸರ್ವೋಚ್ಚ ನ್ಯಾಯಾಲಯಕ್ಕೆ ಬಂದಾಗ ಈ ಬಗ್ಗೆ ನ್ಯಾಯಾಲಯ ಹೇಳಿದ್ದೇನೆಂದರೆ ವೇತನದ ಸರ್ಟಿಫಿಕೆಟ್‌ಗಿಂತ ರಿಟರ್ನ್‌ದಲ್ಲಿ ಕಂಡ ಆದಾಯ ಹೆಚ್ಚಿಗೆ ಇದೆ ಎಂಬ ಒಂದೆ ಕಾರಣಕ್ಕೆ ಅದನ್ನು ತಿರಸ್ಕರಿಸಲಾಗದು. ಈ ಬಗ್ಗೆ ನ್ಯಾಯಾಧಿಕರಣ ಹೇಳಿದಂತೆ 'ವ್ಯತಿರಿಕ್ತ ಹೇಳಿಕೆಯ ಬಗ್ಗೆ ಕ್ಲೇಮುದಾರರು ವಿವರಣೆ ಕೊಡಬೇಕು' ಎಂಬುದನ್ನೂ ಒಪ್ಪಲಾಗದು ಎಂದಿತು ನ್ಯಾಯಾಲಯ. ನ್ಯಾಯಾಲಯ ಗಮನಿಸಿದಂತೆ ಕ್ಲೇಮುದಾರರ ಈ ಬಗೆಗಿನ ಸಾಕ್ಷ್ಯವನ್ನು ನಂಬಲನರ್ಹಗೊಳಿಸುವ ಪ್ರತಿ ಸಾಕ್ಷ್ಯ ಇರಲಿಲ್ಲ. ವೇತನದ ಸರ್ಟಿಫಿಕೆಟ್ ಒಂದನ್ನೆ ಆಧರಿಸಿ ಆದಾಯ ನಿರ್ಣಯ ಮಾಡಬೇಕೆಂದು ಯಾವ ಕಾನೂನು ಇಲ್ಲ ಎಂದಿತು ನ್ಯಾಯಾಲಯ. ವೇತನದ ಸರ್ಟಿಫಿಕೆಟ್ ಮತ್ತು ಆದಾಯದ ರಿಟರ್ನ್ ಮಧ್ಯೆ ವ್ಯತ್ಯಾಸ ಇರುವ ಬಗ್ಗೆ ನ್ಯಾಯಾಲಯ ಹೇಳಿದ್ದೇನೆಂದರೆ, 'ತೀರಿಕೊಂಡ ವ್ಯಕ್ತಿಗೆ ಸಂಬಳದ ಹೊರತಾಗಿಯೂ ಬೇರೆ ಮೂಲದಿಂದ ಆದಾಯ ಇರಬಹುದಾದ ಸಾಧ್ಯತೆ ಇದೆ'.

ಅಸ್ವಸ್ಥ ಮನಸ್ಸಿನ ಸಾಬೀತು: ಸಂಭವನೀಯ ಸಾಧ್ಯತೆಯಿಂದಲೂ ಆಗಬಹುದು

ಆಪಾದಿತನ ಮಾನಸಿಕ ಅಸ್ವಾಸ್ಥ್ಯವನ್ನು ಸಂಭವನೀಯ ಸಾಧ್ಯತೆಯಂತೆಯೂ ಸಾಬೀತುಪಡಿಸಲು ಸಾಧ್ಯವಿದೆ ಎಂದಿದೆ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪೊಂದು. ಯಾವ ಪ್ರಚೋದನೆಯೂ ಇಲ್ಲದೆ ಕುಡುಗೋಲು ಎತ್ತಿಕೊಂಡು ನಾಲ್ವರ ಮೇಲೆ ಹಲ್ಲೆ ಮಾಡಿ ಆ ಪೈಕಿ ಒಬ್ಬರ ಸಾವಿಗೆ ಕಾರಣನಾದ ದೇವಿದಾಸ್ ರಾಠೋಡರನ್ನು ಕೊಲೆಗಾಗಿನ ಅಪರಾಧದ ಶಿಕ್ಷೆಯಿಂದ ಬಿಡುಗಡೆ ಮಾಡಿದ ನ್ಯಾಯಾಲಯ ಈ ಪ್ರಕರಣದಲ್ಲಿ ರಾಠೋಡ್ ಮಾನಸಿಕ ಅಸ್ವಾಸ್ಥ್ಯ ಎಂಬುದು ಸಂಭವನೀಯ ಸಾಧ್ಯತೆಯ ಸಿದ್ಧಾಂತದಂತೆ ಸಾಬೀತಾಗಿದೆ ಎಂದಿದೆ.

ಅಪರಾಧ ಎಸಗಿದಾಗ ಅಪರಾಧಿ ಅಸ್ವಸ್ಥ ಮನಸ್ಕಗಾಗಿದ್ದ ಎಂಬುದು ಸಾಬೀತಾದರೆ ಅಪರಾಧಿಗೆ ಶಿಕ್ಷೆಯಿಂದ ಮಾಫಿ. ಭಾರತೀಯ ದಂಡ ಸಂಹಿತೆಯ ಕಲಂ ೮೪ರಂತೆ ಅಸ್ವಸ್ಥ ಮನಸ್ಸಿನ ವ್ಯಕ್ತಿ ಎಸಗಿದ ಯಾವುದೇ ಕೃತ್ಯ ಅಪರಾಧವಲ್ಲ. ಇದಿಷ್ಟು ಕಾನೂನು ಸ್ಪಷ್ಟಪಡಿಸುವ ಸಂಗತಿ. ಅಷ್ಟೇನು ಸ್ಪಷ್ಟ ಉತ್ತರವಿರಲಾರದ ಪ್ರಶ್ನೆಯೊಂದೂ ಇದರಲ್ಲಿ ಅಡಕ ಆಗಿದೆ. ಅಸ್ವಸ್ಥ ಮನಸ್ಸಿನ ಸ್ಥಿತಿಯನ್ನು ಸಾಬೀತು ಮಾಡುವ ಬಗೆ ಹೇಗೆ? ಈ ಪ್ರಶ್ನೆಗೆ ಒಂದು ಕಾರಣವಿದೆ. ಸಾಕ್ಷ್ಯ ಅಧಿನಿಯಮದಂತೆ ಸಂಗತಿಯೊಂದರ ಸಾಬೀತಿಗೆ ಎರಡು ವಿಧಗಳಿವೆ. ಮೊದಲನೆಯದಾಗಿ, ಮೊದಲನೆ ಅದನ್ನು ಹೇಳಿ ಶಿಸ್ತಿನಿಂದ ಸಾಬೀತುಪಡಿಸುವುದು, ಅಥವಾ ಸಂಭವನೀಯ ಸಾಧ್ಯತೆಯ ಸಿದ್ಧಾಂತದಂತೆ ಸಂಗತಿಯೊಂದನ್ನು ಸಾಬೀತುಪಡಿಸುವುದು. ಉತ್ತರ ಸ್ಪಷ್ಟ ಇಲ್ಲದ ಪ್ರಶ್ನೆ ಎಂದರೆ ಈ ಎರಡು ವಿಧಗಳಲ್ಲಿ ಯಾವ ವಿಧದಿಂದ ಆಪಾದಿತನ ಮಾನಸಿಕ ಅಸ್ವಾಸ್ಥ್ಯವನ್ನು ಸಾಬೀತುಪಡಿಸುವುದು? ಈ ಪ್ರಶ್ನೆಗೆ ಉತ್ತರಿಸಿರುವ ನ್ಯಾಯಾಲಯ ಸಂಭವನೀಯ ಸಾಧ್ಯತೆಯಂತೆಯೂ ಅಸ್ವಸ್ಥ ಮನಸ್ಸನ್ನು ಸಾಬೀತುಪಡಿಸಲು ▶▶೪

ಲಹರಿ ಕಮ್ಯುನಿಕ್ ಮತ್ತು ಲಹರಿ ಸಂವಾದದಲ್ಲಿ ಪ್ರಕಟಗೊಳ್ಳುವ ಎಲ್ಲ ಲೇಖನ, ಬರಹಗಳು ಪತ್ರಿಕೆಯ ಬೌದ್ಧಿಕ ಆಸ್ತಿಯಾಗಿರುತ್ತವೆ. ಸಂಪಾದಕರ ಲಿಖಿತ ಅನುಮತಿಯ ವಿನಃ ಲೇಖನ, ಬರಹಗಳ ಪುನರ್‌ಮುದ್ರಣವು ಕೃತಿಸ್ವಾಮ್ಯ ಅಧಿನಿಯಮ, ೧೯೫೭ರ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆ. ದಯವಿಟ್ಟು ಗಮನಿಸಿ. –ಸಂ.

ವಿದೇಶಿ ವಿನಿಮಯದಲ್ಲಿ ಡಿಕ್ರಿ: ದರಕ್ಕೆ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿ

ವಾದಿ ವಿದೇಶಿ ಹಣದ ಮೌಲ್ಯದಲ್ಲಿ ಡಿಕ್ರಿ ಕೇಳಿ ಪಡೆದರೂ ಜಾರಿ ಪ್ರಕ್ರಿಯೆ ನಡೆಯುವುದು ಭಾರತದಲ್ಲೆ, ವಾದಿಗೆ ದೊರೆಯುವ ಹಣವೂ ಭಾರತದ ಕರೆನ್ಸಿಯಲ್ಲಿಯೆ. ಹೀಗೆ ಜಾರಿ ಪ್ರಕ್ರಿಯೆ ಮಾಡುವಾಗ ನ್ಯಾಯಾಲಯ ಯಾವ ದಿನದ ವಿನಿಮಯ ದರವನ್ನು ಗಣನೆಗೆ ತೆಗೆದು ಕೊಳ್ಳಬೇಕು? ವಿದೇಶಿ ವಿನಿಮಯ ದರಗಳು ದಿನದಿಂದ ದಿನಕ್ಕೆ ಬದಲಾಗುತ್ತಿರುವುದರಿಂದ ಇದೊಂದು ಸಂಕೀರ್ಣ ಸಮಸ್ಯೆ.

ಈ ಸಮಸ್ಯೆಗೆ ತನ್ನ ಇತ್ತೀಚಿನ ತೀರ್ಪೊಂದರಲ್ಲಿ ಮಾರ್ಗದರ್ಶಿ ಸೂತ್ರವೊಂದನ್ನು ಸರ್ವೋಚ್ಚ ನ್ಯಾಯಾಲಯ ಹೆಣೆದಿದೆ.

ಮೊದಲನೆಯದಾಗಿ, ಪಾರ್ಟಿಗಳ ಮಧ್ಯದ ಕರಾರಿನಲ್ಲಿ ಹೇಳಿದ ದಿನದಂದು ಇದ್ದ ದರವನ್ನು ಪರಿಗಣಿಸಬೇಕು ಎನ್ನುತ್ತದೆ ಈ ತೀರ್ಪು. ಅಕಸ್ಮಾತಾಗಿ ಪಾರ್ಟಿಗಳ ಮಧ್ಯದ ಕರಾರಿನಲ್ಲಿ ಅಂತಹ ಯಾವುದೆ ನಿರ್ದಿಷ್ಟ ದಿನವನ್ನು ನಿರ್ಧರಿಸದೆ ಇದ್ದರೆ ನ್ಯಾಯಾಲಯ ಸಾಧ್ಯವಿದ್ದಷ್ಟೂ ಮಟ್ಟಿಗೆ ಉತ್ತಮ ದಿನಾಂಕ (best possible date)ವನ್ನು ಆಯ್ಕೆ ಮಾಡಬೇಕು ಎಂದಿದೆ ನ್ಯಾಯಪೀಠ. ಕೋರ್ಟಿನ ಈ ನಿರ್ಣಯ ೧೯೮೮ರಷ್ಟು ಹಿಂದಿನ ಫೊರಾಸೊಲ್ ವಿರುದ್ಧ ಒಎನ್‌ಜಿಸಿ ಪ್ರಕರಣದ ತೀರ್ಪನ್ನು ಆಧರಿಸಿದ್ದಾಗಿದೆ.

ನ್ಯಾಯಾಲಯದ ಈ ತೀರ್ಪಿಗೆ ಕಾರಣವಾದ ಸಂಗತಿಗಳಿವು: ಮೀನಾಕ್ಷಿ ಸಕ್ಸೆನಾ ವಿದೇಶಕ್ಕೆ ಸರಕು ಕಳಿಸುತ್ತಿದ್ದರು. ಹೀಗೊಮ್ಮೆ ಸರಕು ಕಳಿಸುವಾಗ ಇಸಿಜಿಸಿ ಲಿಮಿಟೆಡ್ (ಆ ಮೊದಲು ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಶನ್ ಆಫ್ ಇಂಡಿಯಾ ನಿಯಮಿತ)ನಿಂದ ತಮಗೆ ಆಗಬಹುದಾದ ನಷ್ಟ ಭರ್ತಿಗೆ ವಿಮಾ ಪಾಲಿಸಿಕೊಂಡರು. ಈ ಪಾಲಿಸಿಯ ಒಂದು ಶರತ್ತೆಂದರೆ ವಿಮಾ ಕಂಪನಿ ಹಣ ಸಂದಾಯ ಮಾಡುವುದಾದರೆ ಯುರೊ ಕರೆನ್ಸಿಯನ್ನು ರೂಪಾಯಿಗಳಲ್ಲಿ ಸಂದಾಯ ಮಾಡಬೇಕು. ಈ ಪಾಲಸಿಗೆ ಸಂಬಂಧಿಸಿದ ಸರಕು ಸಕ್ಸೆನಾ ಕಳಿಸಿದಂತೆ ಫ್ರಾನ್ಸಿಗೆನೂ ಹೋಯಿತು. ಆದರೆ ಖರೀದಿದಾರ ಅದರ ಬೆಲೆಯನ್ನು ಪಾವತಿಸಲಿಲ್ಲ. ಇದರಿಂದಾಗಿ ವ್ಯಾಪಾರದ ನಷ್ಟವಾಯಿತು ಈ ವರ್ತಕಿಗೆ.

ವರ್ತಕಿ ವಿಮಾ ಕಂಪನಿಗೆ ನಷ್ಟ ಭರ್ತಿ ಮಾಡಲು ಕೇಳಿದರು – ವಿಮಾ ಪಾಲಿಸಿಯಂತೆ. ಈ ಪಾಲಿಸಿ ಶರತ್ತಿನಂತೆ ಇಂತಹ ನಷ್ಟ ಆದಾಗ ವಿಮಾ ಕಂಪನಿ ನಷ್ಟದ ಮೊತ್ತದ ಶೇಕಡಾ ೯೦ ರಷ್ಟನ್ನು ಪಾಲಿಸಿ ಕೊಂಡ ವರ್ತಕಿಗೆ ಪಾವತಿಸಬೇಕಿತ್ತು. ಆದರೆ ವಿಮಾ ಕಂಪನಿ ಕೊಟ್ಟದ್ದು ಮಾತ್ರ ೭೯.೫೫% ರಷ್ಟು ಮಾತ್ರ. ಎಂದರೆ ಸುಮಾರು ೧೦% ರಷ್ಟು ಬಾಕಿ ಉಳಿಯಿತು.

ವಿಮಾ ಕಂಪನಿ ಹೀಗೆ ಮಾಡಿದ್ದು ಸೇವೆಯಲ್ಲಿನ ಲೋಪ ಎಂದು ಆಪಾದಿಸಿ, ಪರಿಹಾರ ಮತ್ತು ನಷ್ಟ ಭರ್ತಿ ಕೇಳಿ ಸಕ್ಸೆನಾ ಗ್ರಾಹಕ ಹಿತರಕ್ಷಣಾ ವೇದಿಕೆಯ ಕಟ್ಟೆ ಏರಿದರು.

ವೇದಿಕೆ ದೂರನ್ನು ಪುರಸ್ಕರಿಸಿ ಎದುರುದಾರರು ದೂರುದಾರರಿಗೆ ೧೧,೮೭೫.೭೫ ಯುರೊದ ೯೦%ರಷ್ಟನ್ನು ಕೊಡಬೇಕೆಂದು ಆದೇಶಿಸಿತು.

ಈ ಆದೇಶದ ಜಾರಿಗೆ ದೂರುದಾರರು ಹೊರಟಾಗ ಉದ್ಭವಿಸಿದ ಸಮಸ್ಯೆ ಎಂದರೆ ಯುರೊ ೧೧,೮೭೫.೭೫ರ ೯೦%ರಷ್ಟನ್ನು ರೂಪಾಯಿಯಲ್ಲಿ ಕೊಡುವಾಗ ಯಾವ ದರದಂತೆ ವಿನಿಮಯವನ್ನು ಲೆಕ್ಕಾಚಾರ ಮಾಡುವುದು?

ಈ ಸಮಸ್ಯೆ ಸರ್ವೋಚ್ಚ ನ್ಯಾಯಾಲಯಕ್ಕೆ ಬಂದು ತಲುಪಿತು. ನ್ಯಾಯಾಲಯ ಈ ಬಗೆಗಿನ ಕಾನೂನನ್ನು ಪರಿಶೀಲಿಸಲು ಹೊರಟಾಗ ಅದಕ್ಕೆ ಕಂಡಿದ್ದು ೧೯೮೮ರ ಮೇಲೆ ಉದ್ಧರಿಸಿದ ತೀರ್ಪು.

ಈ ತೀರ್ಪಿನಂತೆ ವಿನಿಮಯದ ದರವನ್ನು ಯಾವ ದಿನದಂತೆ ಲೆಕ್ಕಹಾಕಬೇಕು ಎಂಬ ಪ್ರಶ್ನೆಗೆ ಪಾರ್ಟಿಗಳ ಮಧ್ಯದ ಕರಾರನ್ನು ನೋಡಬೇಕು. ಈ ಕರಾರು ವಿಧಿಸಿದ ದಿನದಂದು ಯಾವ ದರ ಇತ್ತು ಅದರಂತೆ. ಕರಾರು ಯಾವ ದಿನವನ್ನೂ ನಿಗದಿಪಡಿಸದಿದ್ದರೆ ಮಾತ್ರ ನ್ಯಾಯಾಲಯ ತನ್ನ ವಿವೇಚನೆಯನ್ನು ಉಪಯೋಗಿಸಬೇಕು.

ಈ ಹಿನ್ನೆಲೆಯಲ್ಲಿ ನ್ಯಾಯಾಲಯ ಕರಾರನ್ನು ಪರಿಶೀಲಿಸಿದಾಗ ಅದಕ್ಕೆ ಕಂಡಿದ್ದು ಕರಾರಿನ ಶರತ್ತು ನಂ.೧೭. ಈ ಶರತ್ತಿನಂತೆ "ಎಲ್ಲ ಪಾವತಿಗಳು ಭಾರತೀಯ ರೂಪಾಯಿಯಲ್ಲಿ ಇರತಕ್ಕದ್ದು". ಮುಂದುವರಿದು "ವಿದೇಶಿ ಕರೆನ್ಸಿಯನ್ನು ಭಾರತೀಯ ರೂಪಾಯಿಯಲ್ಲಿ ಲೆಕ್ಕ ಹಾಕುವಾಗ ವಿನಿಮಯ ದರ ಸರಕು ಕಳಿಸುವ ದಿನದಂದು ಮುಂಬೈಯಲ್ಲಿ ಬ್ಯಾಂಕ್ ದರ ಎಷ್ಟಿತ್ತೊ ಅಷ್ಟು" ಎಂದೂ ಈ ಶರತ್ತು ವಿಧಿಸಿತ್ತು.

ಈ ದರದಂತೆ ಎದುರುದಾರರು ಭಾರತೀಯ ಕರೆನ್ಸಿಯಲ್ಲಿ ದುಡ್ಡು ಮತ್ತು ಅದಕ್ಕೆ ತಕ್ಕಂತೆ ಬಡ್ಡಿ ಲೆಕ್ಕ ಹಾಕಿ ಕೊಟ್ಟಿದ್ದರೂ ಸಮಾಧಾನಿತಳಾಗದ ವರ್ತಕಿ ಸರ್ವೋಚ್ಚ ನ್ಯಾಯಾಲಯಕ್ಕೆ ಬಂದಿದ್ದರು. ಕರಾರಿನಂತೆ ಹಣ ಸಂದಾಯ ಆಗಿರುವುದನ್ನು ಮನಗಂಡ ನ್ಯಾಯಾಲಯ ಮೀನಾಕ್ಷಿ ಸಕ್ಸೆನಾರ ಅಪೀಲನ್ನು ವಜಾ ಮಾಡಿತು.

ಮಧ್ಯಂತರ ಆದೇಶದಂತೆ ವೈದ್ಯಕೀಯ ಕಾಲೇಜು ಸ್ಥಾಪನೆ: 'ಊಹೂಂ' ಎಂದ ಸರ್ವೋಚ್ಚ ನ್ಯಾಯಾಲಯ

ವೈದ್ಯಕೀಯ ಪರಿಷತ್ತು ವೈದ್ಯಕೀಯ ಕಾಲೇಜೊಂದರಲ್ಲಿ ನ್ಯೂನ್ಯತೆಗಳಿವೆ ಎಂದಾಗಲೂ ಅದರ ಸ್ಥಾಪನೆಗೆ ಮಧ್ಯಂತರ ಆದೇಶದಂತೆ ಅನುಮತಿಸಿದ ಉಚ್ಚ ನ್ಯಾಯಾಲಯವೊಂದರ ಕ್ರಮಕ್ಕೆ ಸರ್ವೋಚ್ಚ ನ್ಯಾಯಾಲಯ ಅಸಮ್ಮತಿ ಸೂಚಿಸಿದೆ. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕ ಎಂಬ ಕಾರಣದಿಂದ ಇಂತಹ ಮಧ್ಯಂತರ ಆದೇಶವನ್ನು ರದ್ದುಪಡಿಸಿದೆ.

ಜೈಪುರ ರಾಷ್ಟ್ರೀಯ ವಿದ್ಯಾಲಯದ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯ ಕಾಲೇಜಿನಲ್ಲಿ ವರ್ಷ ೨೦೧೭-೧೮ಕ್ಕೆ ಅನುಮತಿ ನೀಡುವ ಸಲುವಾಗಿ ವೈದ್ಯಕೀಯ ಪರಿಷತ್ತಿನ ಸಮಿತಿಯೊಂದು ಅಲ್ಲಿ ತೆರಳಿ ಮೂಲಭೂತ ಸೌಕರ್ಯಗಳ ಸಮೀಕ್ಷೆ ನಡೆಸಿತು. ಆ ಹಿಂದಿನ ವರ್ಷವೆ ಎಂದರೆ ಶೈಕ್ಷಣಿಕ ವರ್ಷ ೨೦೧೬-೧೭ರಿಂದ ಈ ಸಂಸ್ಥೆಗೆ ವೈದ್ಯಕೀಯ ಕಾಲೇಜು ನಡೆಸಲು ಅನುಮತಿ ದೊರೆತಿತ್ತು. ಆದರೆ ಮುಂದಿನ ವರ್ಷ ಕಾಲೇಜು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಈ ಸಮಿತಿ ಒಪ್ಪಲಿಲ್ಲ. ಸಮಿತಿಯ ವರದಿಯಂತೆ ಈ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳ, ವೈದ್ಯಕೀಯ ಸೌಲಭ್ಯಗಳ ಹಾಗೂ ಭೌತಿಕ ಸೌಲಭ್ಯಗಳ ಕೊರತೆ ಇತ್ತು. ಈ ಹಿನ್ನೆಲೆಯಲ್ಲಿ ಅನುಮತಿಯನ್ನು ವರ್ಷ ೨೦೧೭-೧೮ಕ್ಕಾಗಿ ನಿರಾಕರಿಸಲಾಗಿತ್ತು.

ಹೀಗೆ ಅನುಮತಿ ನಿರಾಕರಿಸಿದ್ದರಿಂದ ಬಾಧಿತವಾದ ಈ ಸಂಸ್ಥೆ ವೈದ್ಯಕೀಯ ಪರಿಷತ್ತಿನ ಕ್ರಮವನ್ನು ರಾಜಸ್ಥಾನ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿತು.

ಈ ರಿಟ್ ಅರ್ಜಿಯಲ್ಲಿ ನ್ಯಾಯಾಲಯ ಮಧ್ಯಂತರ ಆಜ್ಞೆಯೊಂದನ್ನು ಹೊರಡಿಸಿತು. ಈ ಆಜ್ಞೆಯಂತೆ ಉಚ್ಚ ನ್ಯಾಯಾಲಯ ಈ ವೈದ್ಯಕೀಯ ಸಂಸ್ಥೆ ಶೈಕ್ಷಣಿಕ ವರ್ಷ ೨೦೧೭-೧೮ಕ್ಕೂ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅನುಮತಿಸಿತು. ಹೀಗೆ ಸೇರಿಸಿಕೊಳ್ಳಬಹುದಾದ ವಿದ್ಯಾರ್ಥಿಗಳ ಸಂಖ್ಯೆ ಹಿಂದಿನ ವರ್ಷದಷ್ಟೆ ಎಂದರೆ ೧೫೦ಕ್ಕೂ ಮೀರದಂತೆ ಇರಬೇಕು ಎಂದು ವಿಧಿಸಿತು. ಮುಂದುವರಿದ ನ್ಯಾಯಾಲಯ, ಈ ಅನುಮತಿ ನ್ಯಾಯಾಲಯದ ಅಂತಿಮ ಆಜ್ಞೆಗೆ ಒಳಪಟ್ಟಿರುತ್ತದೆ ಎಂದಿತು. ಅಂತಿಮವಾಗಿ ಸಂಸ್ಥೆಯ ರಿಟ್ ಅರ್ಜಿ ವಜಾಗೊಂಡರೆ ಸಂಸ್ಥೆ ಎಲ್ಲ ವಿದ್ಯಾರ್ಥಿಗಳಿಗೂ ಅವರವರ ಶುಲ್ಕವನ್ನು ಹಿಂದಿರುಗಿಸಬೇಕು ಎಂದೂ ಆದೇಶಿಸಿತು.

ಈ ಆಜ್ಞೆಯ ವಿರುದ್ಧ ಭಾರತೀಯ ವೈದ್ಯಕೀಯ ಪರಿಷತ್ತು ಸರ್ವೋಚ್ಚ ನ್ಯಾಯಾಲಯದ ಕಟ್ಟೆ ಏರಿತು, ಈ ಆಜ್ಞೆ ತಪ್ಪೆಂದಿತು, ಇಂತಹ ಆಜ್ಞೆಯಿಂದ ಶೈಕ್ಷಣಿಕ ಗುಣಮಟ್ಟ ಅಧೋಗತಿಗೆ ಇಳಿಯುತ್ತದೆ ಎಂದಿತು.

ಪರಿಷತ್ತಿನ ಅಪೀಲು ಮೊದಲ ದಿನ ವಿಚಾರಣೆಗೆ ಬಂದಾಗಲೆ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಂತೆ ಸರಕಾರ ನಡೆದುಕೊಳ್ಳಬಾರದೆಂದು ಆದೇಶಿಸಿತ್ತು.

ಈ ಅಪೀಲಿನ ಅಂತಿಮ ತೀರ್ಮಾನದ ವೇಳೆ ಸರ್ವೋಚ್ಚ ನ್ಯಾಯಾಲಯ ಗಮನಿಸಿದಂತೆ ನ್ಯಾಯಾಲಯ *ಪರಿಷತ್ತು ವಿರುದ್ಧ ರಾಜೀವಗಾಂಧಿ ಆರೋಗ್ಯ ವಿವಿ, ಪರಿಷತ್ತು ವಿರುದ್ಧ ಜೆಎಸ್‌ಎಸ್ ವೈದ್ಯಕೀಯ ಕಾಲೇಜ್, ಪರಿಷತ್ತು ವಿರುದ್ಧ ಕಳಿಂಗ ಆರೋಗ್ಯ ವಿಜ್ಞಾನ ಸಂಸ್ಥೆಯ* ಪ್ರಕರಣಗಳಲ್ಲಿ ಮಧ್ಯಂತರ ಆಜ್ಞೆಯಂತೆ ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸಿಕೊಳ್ಳುವಂತಿಲ್ಲ ಎಂಬುದನ್ನು ಒಂದು ಸಿದ್ಧ ಕಾನೂನಿನಂತೆ ಪಾಲಿಸಿಕೊಂಡು ಬರಲಾಗಿತ್ತು. ಹಾಗಾಗಿ ಅಂತಹ ತೀರ್ಪುಗಳಿಗೆ ವಿರುದ್ಧವಾದ ಆಜ್ಞೆಯನ್ನು ಹೊರಡಿಸಿದ ಉಚ್ಚ ನ್ಯಾಯಾಲಯದ ಕ್ರಮವನ್ನು ಈ ನ್ಯಾಯಾಲಯ ಒಪ್ಪಲಿಲ್ಲ. ಮೊದಲು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ನಂತರ ಸಂಸ್ಥೆಯ ವಿರುದ್ಧ ಆಜ್ಞೆ ಬಂದರೆ ಅವರನ್ನು ಕೋರ್ಸಿನಿಂದ ಹೊರ ನಡೆಯಲು ಹೇಳುವುದು ಸರಿಯಾದ ಕ್ರಮ ಅಲ್ಲ ಮತ್ತು ಅದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕ ಎಂದಿತು ನ್ಯಾಯಪೀಠ.

ಮುಂದುವರಿದ ನ್ಯಾಯಾಲಯ ಇಂತಹ ಪ್ರಕರಣಗಳಲ್ಲಿ ಗುಣ ಇದೆ ಎಂದು ಕಂಡು ಬಂದರೆ ಮಧ್ಯಂತರ ಆಜ್ಞೆ ಕೊಡುವ ಬದಲು ಪ್ರಕರಣವನ್ನೆ ಅಂತಿಮವಾಗಿ ತೀರ್ಮಾನಿಸುವುದು ಸೂಕ್ತ ಎಂದಿತು.

ಹೀಗೆಂದ ನ್ಯಾಯಾಲಯದ ಪೀಠ ಪರಿಷತ್ತಿನ ಅಪೀಲನ್ನು ಪುರಸ್ಕರಿಸಿ, ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶವನ್ನು ರದ್ದುಪಡಿಸಿ, ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿಯನ್ನು ಸಂಪೂರ್ಣವಾಗಿ ಅದರ ಗುಣಾವಗುಣಗಳಂತೆ ತೀರ್ಮಾನಿಸಬೇಕೆಂದಿತು.

ಲಹರಿ ವಕೀಲರ ವೇದಿಕೆಗೆ ೩೦ ವರ್ಷಗಳು ತುಂಬಿದ ಸಂದರ್ಭದಲ್ಲಿ ಕಳೆದ ವರ್ಷವಿಡಿ ಈ ಸಂಬಂಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ಸಂಭ್ರಮದ ಸಮಾರೋಪ ಸಮಾರಂಭ ನಡೆದದ್ದು ೩೧-೮-೨೦೧೮ರಂದು. ಇದೆ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ವರದಿಗೆ ನೋಡಿ Lahari Communique ಪುಟ -೩

ಲಿಖಿತ ವರ್ಗಾವಣೆ ಅಧಿನಿಯಮಕ್ಕೆ ತಿದ್ದುಪಡಿ

ಪ್ರಚಲಿತ

ಲಿಖಿತ ವರ್ಗಾವಣೆ ಅಧಿನಿಯಮ, (ಇನ್ನು ಮುಂದೆ ಅಧಿನಿಯಮ ಎನ್ನಲಾಗಿದೆ) ಇತ್ತೀಚೆಗೆ ತಿದ್ದುಪಡಿಯೊಂದನ್ನು ಕಂಡಿದೆ. ಈ ತಿದ್ದುಪಡಿಯಂತೆ ನ್ಯಾಯಾಲಯಕ್ಕೆ ಶರತ್ತಿಗೆ ಒಳಪಟ್ಟು ದೂರುದಾರನಿಗೆ ಪ್ರಕರಣದ ಮೊದಲಲ್ಲೆ ಮಧ್ಯಂತರ ಪರಿಹಾರ ಕೊಡುವಂತೆ ಆದೇಶ ಹೊರಡಿಸಲು ಅಧಿಕಾರ ಪ್ರಾಪ್ತಿ ಆಗಿದೆ. ಈ ತಿದ್ದುಪಡಿಯತ್ತ ಒಂದು ಪಕ್ಷಿ ನೋಟ ಹರಿಸಲು ಈ ಲೇಖನ.

೦೨.೦೮.೨೦೧೮ರಿಂದ ಜಾರಿಗೆ ಬಂದಿರುವ ಈ ತಿದ್ದುಪಡಿಯತ್ತ ನೋಡುವ ಮೊದಲು ಬೇರೆ ಬೇರೆ ರೀತಿಯಿಂದ ನಡೆಯುವ ಪ್ರಕರಣಗಳಿಗೆ ಈ ತಿದ್ದುಪಡಿ ಹಾಗೆ ಅನ್ವಯವಾಗುತ್ತದೆ ಎಂಬುದು ತಿಳಿದಿರಬೇಕು. ಆ ಬಗ್ಗೆಯೂ ಈ ಲೇಖನದಲ್ಲಿ ನೋಡಲಾಗಿದೆ.

ನಿಮಗೆ ಇದು ತಿಳಿದಿದ್ದೆ. ಏನೆಂದರೆ, ಅಪರಾಧಗಳ ವಿಚಾರಣೆಯಲ್ಲಿ ಸಮರಿ ವಿಧಾನ, ಸಮನ್ಸ್ ವಿಚಾರಣೆಯ ವಿಧಾನ, ವಾರಂಟ್ ವಿಚಾರಣಾ ವಿಧಾನ, ಸೆಶನ್ಸ್ ವಿಚಾರಣಾ ವಿಧಾನ ಹೀಗೆ ಬೇರೆ ಬೇರೆ ರೀತಿಯ ವಿಚಾರಣಾ ವಿಧಾನಗಳು ಇವೆ. ಯಾವ ಯಾವ ಅಪರಾಧಗಳನ್ನು ಯಾವ ಯಾವ ರೀತಿಯಲ್ಲಿ ವಿಚಾರಣೆ ಮಾಡಿ ತೀರ್ಪು ಕೊಡಬೇಕೆನ್ನುವುದನ್ನು ಆಯಾ ಸಂದರ್ಭಗಳಲ್ಲಿ ಭಾರತೀಯ ಅಪರಾಧ ಪ್ರಕ್ರಿಯಾ ಸಂಹಿತ(ಇನ್ನು ಮುಂದೆ ಸಂಹಿತೆ ಎನ್ನಲಾಗಿದೆ)ಯೆ ಹೇಳುತ್ತದೆ. ಈ ವಿಚಾರಣಾ ವಿಧಾನಗಳ ಬಗ್ಗೆ ಈ ಸಂದರ್ಭದಲ್ಲಿ ಹೇಳಬೇಕಿರುವುದು ಏನೆಂದರೆ ಚೆಕ್ ಅಮಾನ್ಯ ಪ್ರಕರಣಗಳನ್ನು ಸಮರಿ ಅಥವಾ ಸಮನ್ಸ್ ವಿಚಾರಣಾ ವಿಧಾನಗಳಂತೆ ನಡೆಸಲು ಆಯ್ಕೆಯನ್ನು ಈ ಅಧಿನಿಯಮವೆ ನೀಡಿದೆ. ಈ ಬಗ್ಗೆ ಸಂಸತ್ತು ೦೬.೦೨.೨೦೦೩ರಿಂದ ಜಾರಿಗೆ ಬರುವಂತೆ ೨೦೦೨ರಲ್ಲಿ ಅಧಿನಿಯಮದ ಕಲಂ ೧೪೩ಕ್ಕೆ ತಿದ್ದುಪಡಿ ಮಾಡಿದೆ. ಈ ತಿದ್ದುಪಡಿ ಹೇಳುವುದೇನೆಂದರೆ ಸಂಹಿತೆಯಲ್ಲಿ ಈ ಬಗ್ಗೆ ಏನಾದರೂ ಹೇಳಿರಲಿ ಈ ಅಧಿನಿಯಮದಂತೆ ಇರುವ ಪ್ರಕರಣಗಳನ್ನು ಸಂಹಿತೆಯ ಕಲಂ ೨೬೨ ರಿಂದ ೨೬೫ರಲ್ಲಿ ಹೇಳಿದಂತೆ – ಎಂದರೆ ಸಮರಿ ರೀತಿಯಲ್ಲಿ – ವಿಚಾರಣೆ ಮಾಡತಕ್ಕದು (ಕಲಂ.೧೪೩(೧)).



ಈ ಉಪ ಕಲಮಿನ ಮೊದಲನೆ ಪರಂತುವಿನಂತೆ ಸಮರಿ ವಿಚಾರಣಾ ವಿಧಾನದಂತೆ ಪ್ರಕರಣ ನಡೆಸಿ ಆಪಾದಿತನಿಗೆ ಶಿಕ್ಷೆ ಆದಾಗ ಮ್ಯಾಜಿಸ್ಟ್ರೇಟ್ ಒಂದು ವರ್ಷದವರೆಗಿನ ಸೆರೆವಾಸ ಮತ್ತು ಸಾವಿರ ರೂಪಾಯಿ ಮೀರದಂತೆ ದಂಡ ವಿಧಿಸಬಹುದಾಗಿದೆ. ಈ ಪರಂತು ಹೀಗೆ ಹೇಳುವುದೇಕೆ ಎಂದರೆ ಸಾಮಾನ್ಯ ನಿಯಮದಂತೆ ಸಮರಿ ವಿಚಾರಣೆ ಮಾಡಿದ ಪ್ರಕರಣಗಳಲ್ಲಿ ಮೂರು ತಿಂಗಳಿಗೆ ಹೆಚ್ಚಾದ ಸೆರೆವಾಸ ವಿಧಿಸಲು ಮ್ಯಾಜಿಸ್ಟ್ರೇಟ್‌ಗೆ ಅಧಿಕಾರವಿಲ್ಲ. ಈ ಪರಂತು ಈ ನಿಯಮಕ್ಕೊಂದು ಅಪವಾದ.

ಎರಡನೆ ಪರಂತುವಿನಂತೆ ನಿರ್ದಿಷ್ಟ ಪ್ರಕರಣದ ಪ್ರಾರಂಭದಲ್ಲಿಯೆ ಆಗಲಿ ಅಥವಾ ಪ್ರಕರಣ ನಡೆದಾಗಲೆ ಆಗಲಿ ಪ್ರಕರಣದಲ್ಲಿ ಆಪಾದಿತನಿಗೆ ಒಂದು ವರ್ಷಕ್ಕೆ ಮೀರಿದ ಜೇಲುವಾಸದ ಶಿಕ್ಷೆ ವಿಧಿಸಬೇಕಾಗುತ್ತದೆ ಎಂದೆನಿಸಿದರೆ ಮ್ಯಾಜಿಸ್ಟೇಟ್ ಪ್ರಕರಣದ ವಿಚಾರಣಾ ವಿಧವನ್ನು ಸಮರಿಯಿಂದ ಸಮನ್ಸ್ ವಿಧಾನಕ್ಕೆ ಬದಲಿಸಬಹುದಾಗಿದೆ.

ಅಧಿನಿಯಮದ ಕಲಂ ೧೪೩ರಲ್ಲಿ ಇದಿಷ್ಟೆ ನಮಗೆ ಈಗ ಪ್ರಸ್ತುತ ಇರುವ ವಿಷಯ.

ಈಗ ನಮ್ಮ ಮೂಲ ವಿಷಯಕ್ಕೆ ಹಿಂದಿರುಗೋಣ. ಮಧ್ಯಂತರ ಪರಿಹಾರಕ್ಕೆ ಆಜ್ಞೆ ಮಾಡುವ ಸಲುವಾಗಿ ಈಗಾಗಲೆ ಹೇಳಿದಂತೆ ೦೨.೦೮.೨೦೧೮ರಿಂದ ಜಾರಿಗೆ ಬಂದಂತೆ ತಿದ್ದುಪಡಿ ಮಾಡಿ ಅಧಿನಿಯಮಕ್ಕೆ ಕಲಂ ೧೪೩ಎ ಸೇರಿಸಲಾಗಿದೆ. ಈ ಕಲಮಿನ ವಿಶಿಷ್ಟ ಲಕ್ಷಣಗಳು ಈ ಕೆಳಗಿನಂತೆ ಇವೆ.

- ಕಲಂ ೧೪೩ಎ ಮಧ್ಯಂತರ ಪರಿಹಾರ ಧನವನ್ನು ಚೆಕ್ ಅಮಾನ್ಯ ಪ್ರಕರಣದ ಆರೋಪಿಯು ದೂರುದಾರನಿಗೆ ಕೊಡುವಂತೆ ಆದೇಶಿಸಲು ಮ್ಯಾಜಿಸ್ಟ್ರೇಟ್‌ಗೆ ಅಧಿಕಾರ ನೀಡುತ್ತದೆ.
- ಸಮರಿ ವಿಧಾನದಿಂದ ಪ್ರಕರಣ ನಡೆದರೆ ಆಪಾದಿತ ಆಪಾದನೆಯನ್ನು ಒಪ್ಪದಿದ್ದಾಗ – ಎಂದರೆ not guilty ಎಂದಾಗ ಮಧ್ಯಂತರ ಪರಿಹಾರದ ಆದೇಶ ಮಾಡಬಹುದು.
- * ಪ್ರಕರಣ ಸಮರಿ ಅಲ್ಲದೆ ಬೇರೆ ತರಹದಲ್ಲಿ ನಡೆದಿದ್ದರೆ ಆಪಾದಿತನ ಮೇಲೆ ನ್ಯಾಯಾಲಯ ದೋಷಾರೋಪಣೆಯನ್ನು ಸಿದ್ಧಪಡಿಸಿದರೆ ಆಗ ಮಧ್ಯಂತರ ಪರಿಹಾರ ನಿಧಿಯನ್ನು ಪಾವತಿಸಲು ಆದೇಶಿಸಬಹುದು.
- ಅಮಾನ್ಯಗೊಂಡ ಚೆಕ್ ಮೊತ್ತದ ಶೇಕಡಾ ೨೦ನ್ನು ಮೀರದಂತೆ ಪರಿಹಾರ ಕೊಡುವಂತೆ ಮ್ಯಾಜಿಸ್ಟ್ರೇಟ್ ಆದೇಶಿಸಬಹುದಾಗಿದೆ.
- ಮಧ್ಯಂತರ ಪರಿಹಾರ ನಿಧಿಯನ್ನು ಪಾವತಿಸಲು ಆಪಾದಿತನಿಗೆ ಆದೇಶದ ದಿನದಿಂದ ಅರವತ್ತು ದಿನಗಳ ಅವಕಾಶ ದೊರೆಯಲಿದೆ.
- ಈ ಅರವತ್ತು ದಿನಗಳ ಅವಧಿಯನ್ನು ಮ್ಯಾಜಿಸ್ಟ್ರೇಟ್ ಇನ್ನೂ ಮುವತ್ತು ದಿನಗಳವರೆಗೆ ಲಂಬಿಸಬಹುದಾಗಿದೆ. ಎಂದರೆ ಒಟ್ಟು ಅವಧಿ ತೊಂಬತ್ತು ದಿನಗಳನ್ನು ಮೀರತಕ್ಕದ್ದಲ್ಲ.
- ಇಂತಹ ಪರಿಹಾರ ಧನದ ಪಾವತಿಯ ನಂತರ ಆರೋಪಿಗೆ ಪ್ರಕರಣದಲ್ಲಿ ಬಿಡುಗಡೆ ಆದರೆ ದೂರುದಾರನು ಆಪಾದಿತನಿಗೆ ಪರಿಹಾರ ಧನವನ್ನು ಬ್ಯಾಂಕ್ ದರದ ಬಡ್ಡಿಯೊಂದಿಗೆ ಹಿಂದಿರುಗಿಸಬೇಕು. ಹಿಂದಿರುಗಿಸಲು ಇರುವ ಕಾಲಾವಧಿ ಅರವತ್ತು ದಿನಗಳು. ಈ ಅರವತ್ತು ದಿನಗಳ ಅವಧಿಯನ್ನು ಇನ್ನೂ ಮೂವತ್ತು ದಿನಗಳ ವರೆಗೆ ಮ್ಯಾಜಿಸ್ಟ್ರೇಟ್ ಹೆಚ್ಚಿಸಬಹುದಾಗಿದೆ.
- ಆಜ್ಞೆ ಇದ್ದಾಗ್ಯೂ ಮಧ್ಯಂತರ ಪರಿಹಾರ ಕೊಡಲೊಪ್ಪದ ಆಪಾದಿತನಿಂದ ಫಿರ್ಯಾದುದಾರ ಸಂಹಿತೆಯ ಕಲಂ ೪೨೧ ರಡಿ ದಂಡವನ್ನು ವಸೂಲಿ ಮಾಡಿದಂತೆ ವಸೂಲಾತಿ ಮಾಡಬಹುದು.

ಕಲಂ ೪೨೧ರಂತೆ ಫೈನ್ ಲೆವಿ ವಾರಂಟ್ ಹೊರಡಿಸಿ ಆಪಾದಿತನ ಚರ ಸ್ವತ್ತುಗಳನ್ನು ಹರಾಜು ಹಾಕಿ ಪರಿಹಾರ ಧನ/ದಂಡವನ್ನು ವಸೂಲಿ ಮಾಡಬಹುದು. ಈ ಸ್ವತ್ತಿನಿಂದ ಸಾಕಷ್ಟು ಹಣದ ಮೊತ್ತ ಜಮೆಯಾಗದಿದ್ದರೆ ಜಿಲ್ಲಾ ಕಲೆಕ್ಟರ್ ಕಡೆಯಿಂದ ಆಪಾದಿತನ ಸ್ಥಿರ ಸ್ವತ್ತುಗಳನ್ನು ಹರಾಜು ಮಾಡಿಸಿ ಪರಿಹಾರ ಧನ/ದಂಡವನ್ನು ವಸೂಲು ಮಾಡಬಹುದು.

ನೆನಪಿಡಿ, ಪರಿಹಾರ ಧನವನ್ನು ಆಪಾದಿತನ ಚರ-ಸ್ಥಿರ ಸ್ವತ್ತುಗಳಿಂದ ವಸೂಲು ಮಾಡಲಾಗದಿದ್ದರೆ ಫಿರ್ಯಾದುದಾರನಿಗೆ ಮುಂದೇನೂ ದಾರಿ ಇಲ್ಲ. ಆಪಾದಿತನನ್ನು ಈ ಕಾರಣಕ್ಕೆ ಬಂಧಿಸಿ ಸೆರೆಮನೆಯಲ್ಲಿ ಇಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಮಧ್ಯಂತರ ಪರಿಹಾರ ಧನ ಕೊಡದಿದ್ದರೆ ಸೆರೆವಾಸ ಎಂದು ನ್ಯಾಯಾಲಯ ಹೇಳಿದರೆ ಮಾತ್ರ ಆಪಾದಿತನಿಗೆ ಸೆರೆವಾಸ. ಆದರೆ ಹೀಗೆ ಸೆರೆವಾಸಕ್ಕೆ ಆದೇಶಿಸಲು ಅಧಿನಿಯಮದ ಕಲಂ ೧೪೩ಎ ಪ್ರಕಾರ ಅವಕಾಶ ಇಲ್ಲ.

ಮಧ್ಯಂತರ ಪರಿಹಾರ ಧನದ ಆಜ್ಞೆ ಮಧ್ಯಂತರ ಆಜ್ಞೆಯಾದರೂ ಅಂತಿಮ ಸ್ವರೂಪದ ಆಜ್ಞೆಯಲ್ಲವಾದ್ದರಿಂದ ಇದರ ವಿರುದ್ಧ ಸೆಶನ್ಸ್ ನ್ಯಾಯಾಲಯಕ್ಕೆ ಪುನರೀಕ್ಷಣಾ ಪಿಟಿಶನ್ ಸಲ್ಲಿಸಬಹುದೆ ಎಂಬುದು ಸಂದೇಹಾಸ್ಪದ. ಹಾಗಾಗಿ ಉಚ್ಚ ನ್ಯಾಯಾಲಯಕ್ಕೆ ಸಂಹಿತೆಯ ಕಲಂ ೪೮೨ ಪ್ರಕಾರ ಪಿಟಿಶನ್ ಸಲ್ಲಿಸುವುದೆ ಪರಿಹಾರ ಇರಬಹುದು.

ಲಹರಿ ವಕೀಲರ ವೇದಿಕೆ ಆಯೋಜಿಸಿದ್ದ ವಕೀಲರಿಗಾಗಿನ ರಾಜ್ಯ ಮಟ್ಟದ ಏಕಾಂಕ ನಾಟಕ ಸ್ಪರ್ಧೆಯ ಸಮಾರೋಪ ಸಮಾರಂಭದ ಚಿತ್ರ ಮೊದಲನೆಯದು. ಎರಡನೆಯ ಚಿತ್ರದಲ್ಲಿ ವಿಜೇತ ತಂಡಗಳೊಂದಿಗೆ ವೇದಿಕೆಯ ಮೇಲಿನ ಗಣ್ಯರು.

ಅಸ್ವಸ್ಥ ಮನಸ್ಸಿನ ಸಾಬೀತು...

ಸಾಧ್ಯ ಇದೆ ಎಂದಿದೆ.

ಮೇಲೆ ಹೇಳಿದ ಆಪಾದನೆಗಳಿಗಾಗಿ ರಾಠೋಡರನ್ನು ವಿಚಾರಣೆ ಎದುರಿಸಲು ಸೆಶನ್ಸ್ ನ್ಯಾಯಾಲಯವೊಂದರ ಮುಂದೆ ನಿಲ್ಲಿಸಲಾಯಿತು. ಆಪಾದನೆ ಸಾಬೀತಾಯಿತು. 'ನಾನು ಮಾನಸಿಕ ಅಸ್ವಾಸ್ಥ್ಯ, ನನ್ನ ಕೃತ್ಯದ ಪರಿಣಾಮಗಳ ಬಗ್ಗೆ ನನಗೆ ಅರಿವಿರಲಿಲ್ಲ' ಎಂಬುದೊಂದೆ ಅವರ ಪ್ರತಿರಕ್ಷಣೆ ಆಗಿತ್ತು. ಪ್ರತಿರಕ್ಷಣೆಯ ಪರ ಆಪಾದಿತನಾಗಲಿ, ಮನೊ ವೈದ್ಯರಾಗಲಿ ಸಾಕ್ಷಿಯಾಗಿ ಬರಲಿಲ್ಲ. ಬದಲಿಗೆ ಆಪಾದಿತನ ತಾಯಿ ಮತ್ತು ಸಹೋದರಿ ಸಾಕ್ಷಿಯಾಗಿ ಬಂದು 'ಆಪಾದಿತ ಬಹಳ ಕಾಲದಿಂದ ಮಾನಸಿಕ ಅಸ್ವಾಸ್ಥ್ಯ' ಎಂದರು. ತಾವು ಬಡವರಾಗಿರುವುದರಿಂದ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗಿರಲಿಲ್ಲ ಎಂದರು. ಹಾಗಿದ್ದೂ ಡಾ॥ ಕೆಲ್ಕರ್ ಎಂಬ ಮನೋವೈದ್ಯರೊಬ್ಬರ ಬಳಿ ಚಿಕಿತ್ಸೆ ಪಡೆದು ರಾಠೋಡ್ ತೆಗೆದುಕೊಳ್ಳುತ್ತಿದ್ದ ಔಷಧಿಗಳ ಪಟ್ಟಿ ಕೊಟ್ಟರು-ನ್ಯಾಯಾಲಯಕ್ಕೆ. ಇಬ್ಬರನ್ನು ಬಿಟ್ಟು ಬೇರೆ ಯಾವ ಸಾಕ್ಷಿಯೂ ಪ್ರತಿ ರಕ್ಷಣೆಯ ಪರ ಬರಲಿಲ್ಲ. ಹೀಗಿದ್ದೂ ಆಪಾದಿತನಿಗೆ ಸೆಶನ್ಸ್ ನ್ಯಾಯಾಲಯದಲ್ಲಿ ಜೀವಾವಧಿಯ ಶಿಕ್ಷೆ ಆಗಿ ಉಚ್ಚ ನ್ಯಾಯಾಲಯದಲ್ಲಿ ಇದು ಎತ್ತಿ ಹಿಡಿಯಲ್ಪಟ್ಟಿತು.

ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಪೀಠ ಅಭಿಪ್ರಾಯಿಸಿದ್ದು ಏನೆಂದರೆ 'ಆಪಾದಿತನ ಮನಸ್ಥಿತಿಯ ಬಗ್ಗೆ ಯುಕ್ತ ಸಂಶಯವಂತೂ ಬಂದಿದೆ, ಹೀಗಿದ್ದಾಗ ಆಪಾದಿತ ಸ್ವಾಸ್ಥ್ಯ ಮನಸ್ಕನೊ ಅಲ್ಲವೊ ಎಂಬ ಬಗ್ಗೆ ಅಭಿಯೋಜನೆಯೆ ವಿವರಣೆ ಕೊಡಬೇಕಿತ್ತು'.

ಈ ಬಗ್ಗೆ ೧೯೬೪ರ *ಭಗನ್ ಭಾಯಿ ಥಕ್ಕರ್* ಪ್ರಕರಣ ತೀರ್ಪನ್ನು ನ್ಯಾಯಾಲಯದ ಗಮನಕ್ಕೆ ತರಲಾಯಿತು. ಆ ಪ್ರಕರಣದಲ್ಲಿ ಗೊತ್ತುಪಡಿಸಲಾದ ಕಾನೂನಿನ ಸಂಗತಿಗಳಿವು :

- ಆಪಾದಿತನೆ ಆಪಾದಿಸಲಾದ ಅಪರಾಧ ಎಸಗಿದ್ದಾನೆ ಮತ್ತು ಅಪರಾಧಿಕ ಮನೋಭಾವನೆಯಿಂದ ಎಸಗಿದ್ದಾನೆ ಎಂದು ಅಭಿಯೋಜನೆಯೆ ಯುಕ್ತ ಸಂಶಯಗಳಿಗೆ ಆಸ್ಪದ ಇಲ್ಲದಂತೆ ಸಾಬೀತುಪಡಿಸಬೇಕು. ಈ ಸಾಬೀತುಪಡಿಸುವ ಜವಾಬ್ದಾರಿ ಅಭಿಯೋಜನೆಯ ಹೆಗಲ ಮೇಲೆ ಪ್ರಕರಣದ ಪ್ರಾರಂಭದಿಂದ ಕೊನೆಯವರೆಗೂ ಇರುತ್ತದೆ.
- ಆಪಾದಿತ ಮಾನಸಿಕ ಅಸ್ವಾಸ್ಥನಲ್ಲ ಎಂಬ ಹೋಗಲಾಡಿಸಬಹುದಾದ ಪೂರ್ವ ಭಾವನೆ (rebattable presumption) ಪ್ರತಿ ಪ್ರಕರಣದಲ್ಲೂ ಸಂಹಿತೆಯ ಕಲಂ ೮೪ರಂತೆ ಇರುತ್ತದೆ. ಈ ಪೂರ್ವಭಾವನೆಯನ್ನು ಹೋಗಲಾಡಿಸಲು ಆಪಾದಿತನೆ ಕ್ರಮಕೈಗೊಳ್ಳಬೇಕು. ಆದರೆ ಈ "ಹೋಗಲಾಡಿಸುವ" ಜವಾಬ್ದಾರಿ ಯುಕ್ತ ಸಂದೇಹಗಳಿಗೆ ಆಸ್ಪದ ಇಲ್ಲದಂತೆ ಸಾಬೀತು ಪಡಿಸುವ ಅಗತ್ಯ ಇಲ್ಲ, ಬದಲಾಗಿ ಸಿವಿಲ್ ಪ್ರಕರಣಗಳಲ್ಲಿ ವಾಸ್ತವಾಂಶ ಒಂದನ್ನು ಸಾಬೀತುಪಡಿಸಬೇಕಾದ ರೀತಿಯದು.
- ಆಪಾದಿತ ಪ್ರಕರಣದಲ್ಲಿ ಹಾಜರುಪಡಿಸಿದ ಸಾಕ್ಷ್ಯದಿಂದ ಆಪಾದಿತ ಮಾನಸಿಕ ಅಸ್ವಾಸ್ಥ್ಯ ಎಂಬ ನಿರ್ದಿಷ್ಟ ತೀರ್ಮಾನಕ್ಕೆ ನ್ಯಾಯಾಲಯ ಬರಲಾಗದಿದ್ದರೂ, ಆಪಾದಿತನ ಸಾಕ್ಷ್ಯದಿಂದ ಅಥವಾ ಅಭಿಯೋಜನೆಯ ಸಾಕ್ಷಿಗಳ ಬಾಯಿಯಿಂದ ಬಂದಿರಬಹುದಾದ ಮಾತಿನಿಂದ ನ್ಯಾಯಾಲಯಕ್ಕೆ ಆಪಾದಿತ ಮಾನಸಿಕ ಅಸ್ವಾಸ್ಥ್ಯ ಎಂಬ ಯುಕ್ತ ಸಂದೇಹ ಬಂದರೂ ಅದರ ಪ್ರಯೋಜನವನ್ನು ಆಪಾದಿತನಿಗೆ ಕೊಡಬೇಕು.

ಈ ತೀರ್ಪಿನ ನಿರ್ಣಯದ ಹಿನ್ನೆಲೆಯಲ್ಲಿ ಪ್ರಸಕ್ತ ಪ್ರಕರಣದಲ್ಲಿ ಅನ್ವಯಿಸಬಹುದಾದ ಕಾನೂನನ್ನು ನೋಡಿತು-ನ್ಯಾಯಾಲಯ. ಸಂಹಿತೆಯ ಕಲಂ ೮೪ ಸಾಮಾನ್ಯ ನಿಯಮಗಳಿಗೆ ಒಂದು ಅಪವಾದ. ಅಪರಾಧಿಕ ಘಟನೆ ಎಸಗಿದರೂ ಆಪಾದಿತ ಅಪರಾಧಿಯಲ್ಲ - ಅವನು / ಅವಳು ಮಾನಸಿಕ ಸ್ವಾಸ್ಥ್ಯವಿರದ ವ್ಯಕ್ತಿ ಆಗಿದ್ದರೆ, ಇದು ಕಲಂ ೮೪ರ ತಿರುಳು. ಸಾಕ್ಷ್ಯ ಅಧಿನಿಯಮದ ಕಲಂ ೧೦೫ರಂತೆ ಈ ಸಂಗತಿಯನ್ನು ಸಾಬೀತುಪಡಿಸುವ ಜವಾಬ್ದಾರಿ ಅಭಿಯೋಜನೆಯ ಜವಾಬ್ದಾರಿಯಷ್ಟು ಗುರುತರವಾದದ್ದಲ್ಲ. ಎಂದರೆ ಈ ಸಂಗತಿಯನ್ನು ಆಪಾದಿತ ಯುಕ್ತ ಸಂದೇಹಗಳಿಗೆ ಹೊರತಾಗಿ ಸಾಬೀತುಪಡಿಸ ಬೇಕಿಲ್ಲ. ಇದನ್ನೆ ಬೇರೆ ಮಾತಿನಲ್ಲಿ ಹೇಳುವುದಾದರೆ ಆಪಾದಿತನ ಪ್ರತಿರಕ್ಷಣೆಯಲ್ಲಿ ಆಪಾದಿತನ ಮಾನಸಿಕ ಅಸ್ವಸ್ಥ ಸ್ಥಿತಿಯನ್ನು ಸಂಭವನೀಯ ಸಾಧ್ಯತೆ ಎಂದು ತೋರಿಸಿಕೊಟ್ಟರೆ ಸಾಕು. ಹೀಗೆ ತೋರಿಸಿಕೊಟ್ಟ ನಂತರ ಆಪಾದಿತ ಮಾನಸಿಕ ಅಸ್ವಸ್ಥ ವ್ಯಕ್ತಿಯಲ್ಲ ಎಂದು ತೋರಿಸುವ ಜವಾಬ್ದಾರಿ ಅಭಿಯೋಜನೆಯದು, ಹೀಗೆಂದಿತು ನ್ಯಾಯಾಲಯ.

ಹಾಲಿ ಪ್ರಕರಣದಲ್ಲಿ ಆಪಾದಿತನ ಸಹೋದರ ಮತ್ತು ತಾಯಿ ನ್ಯಾಯಾಲಯದ ಮುಂದೆ ಆಪಾದಿತ ತೆಗೆದುಕೊಳ್ಳುತ್ತಿದ್ದ ಔಷಧಿಗಳ ಚೀಟಿ ಇಟ್ಟಿದ್ದರು. ಆ ಎಲ್ಲ ಔಷಧಿಗಳು ಮನಸ್ಸಿನ ಉನ್ಮಾದವನ್ನು ಕಡಿಮೆ ಮಾಡಲು ವೈದ್ಯರು ಕೊಡುವ ಔಷಧಗಳೆ ಆಗಿದ್ದವು.

ಈ ಎಲ್ಲ ಸಂಗತಿಗಳ ಆಧಾರದಿಂದ ಆಪಾದಿತ ತಮ್ಮ ಮಾನಸಿಕ ಸ್ಥಿತಿಯ ಬಗ್ಗೆ ನ್ಯಾಯಾಲಯದ ಮನಸ್ಸಿನಲ್ಲಿ ಯುಕ್ತ ಸಂದೇಹ ಮೂಡಿಸುವಲ್ಲಿ ಸಫಲರಾಗಿದ್ದಾರೆ ಎಂಬ ನಿರ್ಣಯಕ್ಕೆ ಬಂದಿತು ಸರ್ವೋಚ್ಚ ನ್ಯಾಯಾಲಯ. ಇಂತಹ ನಿರ್ಣಯಕ್ಕೆ ಬಂದ ನ್ಯಾಯಾಲಯ ಸೆಶನ್ಸ್ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಎರಡು ತಪ್ಪೆಸಗಿವೆ ಎಂದು ಹೇಳಿ ಆಪಾದಿತನ ಬಿಡುಗಡೆಗೆ ಆದೇಶಿಸಿತು.

ಮಾರಾಟ ಪತ್ರದ ರದ್ದತಿ....

ಅಧಿಕಾರಿಯನ್ನು ಸಾಕ್ಷಿಯಾಗಿ ನ್ಯಾಯಾಲಯಕ್ಕೆ ಕರೆಸಿದರು. ಈ ಅಧಿಕಾರಿ 'ಪತ್ರದ ಅಡಕಗಳನ್ನು ಎರಡೂ ಪಕ್ಷಗಳವರಿಗೆ ತಿಳಿಸಿ, ಅವರ ಸಹಿ ಮತ್ತು ಒಪ್ಪಿಗೆಯನ್ನು ಪಡೆದೆ ನೊಂದಣಿ ಮಾಡಿದ್ದೆ' ಎಂದರು. ವಾದಿ ಈ ಸಾಕ್ಷಿಯನ್ನು ಪಾಟಿ ಸವಾಲಿಗೆ ಒಳಪಡಿಸಿದರೂ ಉಪಯೋಗವಾಗಲಿಲ್ಲ. ಹಾಗಿದ್ದೂ ವಿಚಾರಣಾ ನ್ಯಾಯಾಲಯ ದಾವಾ ಡಿಕ್ರಿ ಮಾಡಿತು.

ಪ್ರತಿವಾದಿಗಳು ಈ ತೀರ್ಪು ಮತ್ತು ಡಿಕ್ರಿಯನ್ನು ಜಿಲ್ಲಾ ನ್ಯಾಯಾಲಯದ ಮುಂದೆ ಅಪೀಲು ದಾಖಲಿಸಿ ಪ್ರಶ್ನಿಸಿದರು. ನ್ಯಾಯಾಲಯ ಅವರ ಅಪೀಲನ್ನು ಮಾನ್ಯ ಮಾಡಿ ಕೆಳ ನ್ಯಾಯಾಲಯದ ಡಿಕ್ರಿಯನ್ನು ರದ್ದುಪಡಿಸಿತು.

ನಂತರ ವಾದಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದರು. ಅಪೀಲು ಗುಣ ಕಾಣಲಿಲ್ಲ.

ಈಗ ವಾದಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಬಂದರು, ಖರೀದಿ ಪತ್ರ ಮೋಸದಿಂದ ಮತ್ತು ಸುಳ್ಳು ಹೇಳಿ ಬರೆಸಿಕೊಂಡದ್ದಾಗಿದೆ, ಅದನ್ನು ರದ್ದುಪಡಿಸಬೇಕೆಂಬ ಆಪಾದನೆಯನ್ನು ಪುನರುಚ್ಚರಿಸಿದರು.

ನ್ಯಾಯಾಲಯ ಗಮನಿಸಿದಂತೆ ವಾದಿ ಮೇಲೆ ಹೇಳಿದ ಆಪಾದನೆಯನ್ನು ಬರಹದಲ್ಲಿ ದಾಖಲಿಸಿದ್ದು ಮತ್ತು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದನ್ನು ಬಿಟ್ಟರೆ ಈ ಬಗ್ಗೆ ಮತ್ತೇನೂ ಮಾಡಿರಲಿಲ್ಲ. ತಮ್ಮ ಆಪಾದನೆಯನ್ನು ಪುಷ್ಟೀಕರಿಸಲು ಯಾವ ಸ್ವತಂತ್ರ ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆ ತಂದಿರಲಿಲ್ಲ. ಈ ನಡುವಳಿಕೆಗೆ ವಿರುದ್ಧವಾಗಿ ಪ್ರತಿವಾದಿ ನೊಂದಣಾಧಿಕಾರಿಯನ್ನಲ್ಲದೆ ಮಾರಾಟ ಪತ್ರಕ್ಕೆ ಸಹಿ ಮಾಡಿದ ಇಬ್ಬರು ಸಾಕ್ಷಿಗಳನ್ನು ಕರೆತಂದು ಅವರಿಂದ ಮಾರಾಟ ಪತ್ರ ಬರೆದು ಕೊಟ್ಟ ಸಂದರ್ಭದ ಬಗ್ಗೆ ಸಾಕ್ಷ್ಯ ಹೇಳಿಸಿದ್ದರು. ಈ ಸಾಕ್ಷ್ಯಗಳಲ್ಲಿ - ಮುಖ್ಯ ವಿಚಾರಣೆ ಮತ್ತು ಪಾಟಿ ಸವಾಲಿನಲ್ಲಿ - ವಂಚನೆ ಮತ್ತು ಸುಳ್ಳು ನಿವೇದನೆ ಮಾಡಿದ ಬಗ್ಗೆ ಯಾವ ಮಾತೂ ಇರಲಿಲ್ಲ. ಇದರಿಂದ ನ್ಯಾಯಾಲಯಕ್ಕೆ ಮನವರಿಕೆ ಆಗಿದ್ದೇನೆಂದರೆ ೧೧.೦೭.೧೯೯೧ರಂದು ಮಾರಾಟ ಪತ್ರ ಬರೆದು ಕೊಟ್ಟಾಗ ಧರಮ್ ಸಿಂಘ್ ಸ್ವಸ್ಥ ಮನಸ್ಕರಾಗಿದ್ದರು. ಅವರು ವಂಚನೆ ಅಥವಾ ಮೋಸದ ಇಲ್ಲವೆ ಸುಳ್ಳಿನ ಪ್ರಭಾವಕ್ಕೆ ಒಳಗಾಗಿರಲಿಲ್ಲ. ಇದರಿಂದಾಗಿ ಸಹಜವಾಗಿಯೆ ನ್ಯಾಯಾಲಯವು ವಾದಿ ತಮ್ಮ ಹೇಳಿಕೆಯನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂಬ ನಿರ್ಣಯಕ್ಕೆ ಬಂದಿತು. ಹೀಗೆ ನಿರ್ಣಯಿಸಿದ ನ್ಯಾಯಾಲಯ ಅಪೀಲನ್ನು ವಜಾ ಮಾಡುವ ತೀರ್ಮಾನ ತೆಗೆದುಕೊಂಡಿತು.

ಧರಣಿ ಹಕ್ಕು...

ಮುಷ್ಕರಗಳಿಂದಾಗಿ ಆಗುತ್ತಿದ ಅನಾನುಕೂಲಗಳನ್ನು ಸಹಿಸಿ ಸಾಕಾಗಿದ್ದ ಅಲ್ಲಿನ ಕೆಲ ನಿವಾಸಿಗಳು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿ ಅಲ್ಲಿನ ಸ್ಥಳ ಧರಣಿ-ಮುಷ್ಕರಕ್ಕೆ ಬಳಕೆ ಆಗುವುದನ್ನು ನಿಷೇಧಿಸಲು ಕೋರಿದ್ದರು. ಅವರ ಕೋರಿಕೆಯನ್ನು ಮನ್ನಿಸಿ ನ್ಯಾಯಾಧಿಕರಣ ಧರಣಿ ಮುಷ್ಕರವನ್ನು ನಿಷೇಧಿಸಿತು. ಈ ಆಜ್ಞೆಯ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಕಾರ್ಮಿಕ ಸಂಘಟನೆಯೊಂದು ರಿಟ್ ಅರ್ಜಿ ಸಲ್ಲಿಸಿತ್ತು. ಅದರೊಂದಿಗೆ ಕೈಜೋಡಿಸಿದ್ದವು. ಇನ್ನಿತರ ಹಲವು ಸಂಘಟನೆಗಳು.

ಈ ರಿಟ್ ಅರ್ಜಿದಾರರ ಮುಖ್ಯವಾದವೆಂದರೆ 'ಧರಣಿ-ಮುಷ್ಕರ ನಮ್ಮ ಹಕ್ಕು, ನ್ಯಾಯಾಧಿಕರಣದ ಆಜ್ಞೆಯಿಂದ ಈ ಹಕ್ಕಿನ ಉಲ್ಲಂಘನೆ ಆಗಿದೆ, ಹಾಗಾಗಿ ಆಜ್ಞೆಯನ್ನು ರದ್ದುಪಡಿಸಬೇಕು'.

ಸರ್ವೋಚ್ಚ ನ್ಯಾಯಾಲಯ ಈ ವಾದವನ್ನು ಒಪ್ಪಲಿಲ್ಲ. ಧರಣಿ ಹೂಡುವುದು ಹಕ್ಕೆ ಆದರೂ ತೋಚಿದಲ್ಲಿ, ಅಲ್ಲಿನ ನಿವಾಸಿಗಳ ಅನುಕೂಲ ಅನಾನುಕೂಲ ನೋಡದೆ ಧರಣಿ ಕೂಡುವುದು ಹಕ್ಕಿನ ಭಾಗ ಅಲ್ಲ ಎಂದಿತು. ಹಾಗಿದ್ದೂ, ಅಲ್ಲಿನ ನಿವಾಸಿಗಳಿಗೆ, ಅಲ್ಲಿನ ರಸ್ತೆಯ ಮೂಲಕ ಸಾಗುವ ಜನರಿಗೆ ತೊಂದರೆ ಆಗದಂತಹ ಮೆರವಣಿಗೆ, ಧರಣಿಗೆ ಅವಕಾಶ ಕಲ್ಪಿಸಬಹುದು ಎಂದಿದೆ ಈ ತೀರ್ಪು.

ಪಿಜಿಸಿ ಚೆಂಗಪ್ಪ ಸ್ಮಾರಕ ಉಪನ್ಯಾಸ ೨೦೧೮

೨೦೧೮ರ ಪಿಜಿಸಿ ಚೆಂಗಪ್ಪ ಸ್ಮಾರಕ ಉಪನ್ಯಾಸವನ್ನು ನವೆಂಬರ್ ೨೪ರಂದು ಆಯೋಜಿಸಲಾಗಿದೆ. ಉಪನ್ಯಾಸಕರು, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಮೋಹನ್ ಎಂ. ಶಾಂತನಗೌಡರ್. ಹೆಚ್ಚಿನ ವಿವರಗಳಿಗೆ ನೋಡಿ Lahari Communique, ಪುಟ ೬

ಸರ್ವರೂ ಆಹ್ವಾನಿತರು

ಅನಿವಾರ್ಯ ಕಾರಣಗಳಿಂದಾಗಿ ಪತ್ರಿಕೆಗಳ ಎರಡು ಸಂಚಿಕೆಗಳನ್ನು ಸೇರಿಸಿ ತರಲಾಗುತ್ತಿದೆ. ಈಗ ನಿಮ್ಮ ಕೈಯಲ್ಲಿರುವುದು Lahari Communique, ಸೆಪ್ಟೆಂಬರ್-ಅಕ್ಟೋಬರ್ ಮತ್ತು ಲಹರಿ ಸಂವಾದ ಶ್ರಾವಣ-ಭಾದ್ರಪದ ಮತ್ತು ಭಾದ್ರಪದ-ಅಶ್ವಿನ ಸಂಚಿಕೆಗಳು. ಸಹಕಾರವಿರಲಿ. -ಸಂ.

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ನಂ. ೮/೩೪೦, ಪ್ರಭಾತ್ ಕಾಂಪ್ಲೆಕ್ಸ್, ಕೆ.ಜಿ.ರಸ್ತೆ, ಬೆಂಗಳೂರು-೫೬೦ ೦ೠ
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೯೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩. ಸಂಪರ್ಕಿಸಿ : aravindneglur@gmail.com
KARBIL 01707/10/1/2009-TC ಸಂಪಾದಕರು : ಅರವಿಂದ ಎಂ. ನೆಗಳೂರ RNI No. KARBIL 2010/64911

Some Recent Judgments-An Overview

Kalpana Mehta v. Union of India is a Constitution Bench decision on vital issues relating to the permissibility of the Court looking into, referring to and relying on reports of Parliamentary Committees in a litigation before the Court. The Court highlighted the importance of maintaining the delicate balance between the different constitutional institutions while interpreting constitutional provisions. Parliamentary sovereignty in the Westminster form of government has given way to constitutional supremacy in India. The Constitution does not envisage the existence of absolute power in any institution. Judicial scrutiny of the exercise of parliamentary privileges is not excluded where there is a violation of a fundamental right or gross illegality. The Court spoke of the complementarity of institutions and their work. Separation of powers, as a principle, constitutes the cornerstone of our democratic Constitution. But its application in the actual governance of the polity is nuanced and the significant precept is that no institution is entrusted with absolute power or is above the Constitution.

constant **Perspective**
V. Sudhish Pai
vsudhishpai@gmail.com

The Court enunciated the need to be conscious of the democratic transformation which the Constitution aspires and of a movement from a culture of authority and submission to the law to one of justification and rights under the law. Placing reliance on the report of a Parliamentary Committee does not infringe parliamentary privilege. No Member of Parliament is sought to be made liable for what has been said or done in the House. The correctness or validity of a report is not something which can be agitated in Court or the Court can look into. The function of judicial review being facilitating the realisation of socio-economic rights guaranteed by the Constitution and construing it in the context of the modern notion of separation of powers, there is no real conflict between independence of the judicial process and its reliance on published reports of Parliamentary Committees. Parliamentary material including reports are public documents which can be submitted to the Court without any permission from Parliament and of which Court shall take judicial notice. There is no violation of any parliamentary privilege in accepting Parliamentary Committee reports in courts. They can be taken judicial notice of and regarded as admissible in evidence, but cannot be challenged or called in question.

The same Constitution Bench in *Government of NCT of Delhi vs. Union of India* dealt with issues of cardinal significance touching the nuances of our parliamentary form of government. It was held that a holistic approach has to be adopted and constitutional interpretation has to be such as would promote the democratic spirit and ethos of the Constitution which pursues a vision of fulfilling the constitutional values through a democratic polity. Institutions are crucial to the realization of democracy, nations suffer when institutions of governance fail. Criticism and dissent form the heart of democratic functioning; the responsiveness of institutions is determined by their ability to be receptive to differences and perceptive to the need for constant engagement and dialogue. Constitutional skirmishes are not unhealthy, they test the resilience of democracy. The success of a system must depend on the statesmanship of those at their helm. For the successful working of a constitution, constitutional laws have to rest on a substratum of constitutional morality which is not mere allegiance to the provisions and principles of the Constitution but imbibing a constitutional culture.

The essentials of a parliamentary system- collective responsibility and 'aid and advice'- are mutually reinforcing principles, they affirm and enhance the democratic values on which the Cabinet form of government is founded. It was laid down that Delhi is in a class by itself with a special status, but it continues to be a 'Union Territory', the government envisaged for Delhi basically replicates the Westminster model subject to the express provisions of Arts 239 AA & 239AB. The Lt. Governor is bound to act on the aid and advice of the NCT Government in areas where the legislature can legislate. While the Lt. Governor is to be kept appraised there is no requirement of his concurrence for the decisions of the Government except where it is expressly so required. It is not every matter which the Lt. Governor can refer to the President. Matters to be referred to the President are essentially and generally only those which are not within the legislative competence of the Delhi legislature. All references by the Lt. Governor must be tempered by the awareness that a representative government enjoys a wide latitude to take decisions on matters in its executive domain, that the Ministry has a constitutionally recognised function and the Lt. Governor is not to supplant the constitutional structure.

Both these judgments have taken a balanced view and are a fillip to constitutionalism and constitutional culture, institutions and values. ●

Tri-Decennial Valedictory

The year long tri-decennial celebrations of Lahari Advocates Forum culminated in a valedictory function held on 31st August 2018 at YMCA Hall, Nrupatunga Road, Bengaluru. Justice M. N. Venkatachaliah, former Chief Justice of India, graced the occasion as the Chief Guest and enthused the gathering to go back to the roots of advocacy as the legal profession is presently at cross roads. While expressing his appreciation for the various activities conducted by the Lahari fraternity, Justice Venkatachaliah stressed that more programmes should be oriented towards shaping young minds to reach the high standards that the legal profession should be identified with. R. G. Chowhan, Secretary of Lahari Advocates Forum presented the Secretary's report regarding the various projects undertaken to commemorate the tri-decennial year. Justice N. Santosh Hegde, Former Judge, Supreme Court of India and former Karnataka Lokayukata had inaugurated the tri-decennial celebrations in August 2017 and thereafter a book fair, family trip for the members of Lahari, quiz competition for lawyers and law students and a state level drama competition for Advocates-'Lahari Lawyers Act 2018' were the highlights of the tri-decennial celebrations. Winners of the quiz competition were given their prize money. As a grand culmination of the eventful tri-decennial year, a souvenir was released as also Compact Disks (CDs) containing the digital version of the 'Communique' right from its first issue. It was only apt that the flagship project of the organisation should find such immortalization in the tri-decennial year. The crowd dispersed with a mix of nostalgia and enthusiasm to do more to keep the Lahari flag flying high . ●

Quotes

"Courts will have to take into account certain principles while exercising their discretion in sentencing, such as proportionality, deterrence and rehabilitation. In proportionality analysis, it is necessary to assess seriousness of offence in order to determine commensurate punishment for offender. Seriousness of offence depends, apart from other things, also upon its harmfulness. Principle governing imposition of punishment will depend upon facts and circumstance of each case. However, sentence should be appropriate, adequate, just, proportionate and commensurate with nature and gravity of crime and manner in which crime is committed. Gravity of crime, motive for crime, nature of crime and all other attending circumstances have to be borne in mind while imposing sentence. Court cannot afford to be casual while imposing sentence".

-SC on sentencing policy

Taxing statues...

ambiguity in construction. However, a three judge bench in *Sun Exports* case in 1997 ruled that an ambiguity in tax exemption provision or notification must be interrelated so as to favour the assessee claiming the benefit of such exemption. The correctness of this rule was doubted in the appeal filed against M/s Dilip Kumar and Company. Therefore, the question was referred to a constitution bench.

Question of interpretation arises when there is any ambiguity in the language employed in the statute, rule or notification. Courts need not resotrt to interpretation if language is clear. When ambiguity creeps into language, Courts have to ponder over the question as to who should receive benefit of ambiguity, Revnue or Assessee. *Sun Exports* Case had held that benefit of such ambiguity should go to the assessee therein. The referring Court had felt that this position is contrary to many judgments which had said that Revenue should be the beneficiary of such ambiguity.

Having considered catena of judgments on the point, treaties on interpretation by J| G.P.Singh, Lord Halsbury and Lord Simonds the Court came to the conclusion that taxing statutes like penal statutes should receive strict interpretation, burden of proof of eligibility being on the person who claims benfit. Importantly, the Court held that ambiguity in the language notification should go to Revenu and not to Assessee. The Court further held that the ratio in *Sun Export* case is incorrect. "Exemption notification should be interpreted strictly; the burden of proving applicability would be on the assessee to show that his case comes within the parameters of the exemption clause or exemption notification" , ruled the Court on the issue of nature of interpretation of notification issued under taxing statutes. "When there is ambiguity in exemption notification which is subject to strict interpretation, the benefit of such ambiguity cannot be claimed by the subject/assessee and it must be interpreted in favour of the revenue" held the Court on the question as to who should receive benefit of ambiguity.

Lahari Advocates Forum

12TH P.G.C. CHENGAPPA MEMORIAL LECTURE

on Friday, the 23rd of November 2018 at 5.00 p.m.

Hon'ble Mr. Justice Mohan M. Shantanagoudar

Judge, Supreme Court of India

will deliver a lecture on

"DIMENSIONS AND PARADIGMS OF VICTIM COMPENSATION IN CRIMINAL TRIALS"

Hon'ble Mr. Justice Dinesh Maheshwari

Chief Justice, High Court of Karnataka

will be the Guest of Honour

Venue: Patron-in-Chief Hall, High Court of Karnataka

Tea: 4.30 p.m.

To *BOOK-POST*

....

....

....

Tit bits

In the state level XX State Master's swimming competition held at Vijayanagar Aquatic center, Bengaluru on 1st and 2nd of September 2018, Jyothi. M, advocate, won gold medals in the 100 and 50 metres back stroke events, silver in the 50 meters free style and bronze in the 400 meters free style categories. Earlier in February this year Jyothi swam 2.5 Kms and secured the 3rd place in the national level Premier Open Water Swimming competition.

In the recently concluded World Meet at Malaga, Spain, Renuka Deshpande, advocate was part of the Indian relay team that stood 9th in the 4x100 relay and she also stood 17th in the triple jump beating participants from 120 countries across the world. The overall tally of India was 3 gold, 3 silver and 3 bronze medals.

On 16-09-2018 Bengaluru Advocates Co-operative Society held its 54th annual general body meeting under the Chairmanship its President K.V.Keshv.

Lahari Advocates Forum

The General Body meeting and election will be held at 4.30 p.m. on 7th December at the Old Students Association Hall, Central College Grounds, Bengaluru.

Obituary

We regret to inform the sad demise of the following

- On 21-06-2018 K.Srinivasan Judge (DRT 2-), passed away at Bengaluru.
- On 24-06-2018 D.Anjana Murthy (38), Advocate, passed away at Bengaluru.
- On 25-06-2018 G.A.Veerakyatharaya Advocate, passed away at Bengaluru.
- On 29-06-2018 Johnson Vargese (70), Advocate, passed away at Bengaluru.
- On 14-07-2018.K.R.Nagaraja Rao (96), Advocate, passed away at Bengaluru. He had previously retired as Principal Secretary to Chief Justice of High Court.
- On 17-07-2018 Srinivas Rao, Advocate, passed away at Bengaluru.
- On 28-07-2018 L.B.Gangadharaiah (80), Advocate, passed away at Bengaluru.
- On 31-07-2018 H.L.Narasimha Murthy (80), Advocate, passed away at Bengaluru.
- 31-07-2018 B.Krishnappa (65), Advocate, passed away at Bengaluru.
- On 31-07-2018 K.B.Sachidananda Murthy, Advocate, passed away at Bengaluru.
- On 01-08-2018 H.V.Thimmegowda (85), Advocate, passed away at Bengaluru.
- On 06-08-2018 G.N.Lokeshwara, Advocate, passed away at Bengaluru.
- On 14-08-2018 K.R.SrinivasaRao (84), Advocate, passed away at Bengaluru.
- On 22-08-2018 Ujwala Walwadikar, Advocate, passed away at Bengaluru.
- On 22-08-2018 B.Z.Sabhiha Sultana, Advocate, passed away at Bengaluru.
- On 24-08-2018 C.M.Ananda (39), Advocate, passed away at Bengaluru.
- On 24-08-2018 M.K.Ashok, 2nd Addl Senior Civil Judge Bengauru Rural District, passed away at Bengaluru.
- On 29-08-2018 L.Pabhakar, Advocate, passed away at Bengaluru.

Printed & Published by : Lahari Advocates Forum, Bengaluru
Printed at : Vee Kay Printers & Publishers, # 396, Ooliga Complex, Sampige Road, Malleshwaram, Bengaluru-560 003.
Published at : # 8/340, Prabhat Complex, K.G. Road, Bengaluru-560 009
Editor : Aravind. M. Neglur. **aravindneglur@gmail.com** **RNI No. KARBIL 2010/64911**